# ನೇಸರು

ತಿಂಗಳೋಲೆ
ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVIII - 2 ಫೆಬ್ರುವರಿ 2001

## ಈ ಸಂಚಿಕೆಯಲ್ಲಿ

| | | |
|---|---|---|
| ಅಸೋಸಿಯೇಷನ್ನಿನಲ್ಲಿ | | 2 |
| ನಿಮಗೆ ಇರಲೇಬೇಕಾದ ಕೊಬ್ಬು | ● ಪ್ರಕಾಶ್ ಜಿ. ಭಟ್ | 3 |
| ವಿಶಿಷ್ಟ ಕಾದಂಬರಿಕಾರ - ಕುಸುಮಾಕರ | ● ಡಾ. ಜಿ.ಎನ್. ಉಪಾಧ್ಯ | 6 |
| ಆಶಾಪೂರ್ಣಾ ದೇವಿ | ● ಲಕ್ಷ್ಮೀನಾರಾಯಣ ಆರೋರಾ | 7 |
| ಜೋಗ್ಯೋರ ಅಂಜಪ್ಪನ ಕೋಳೀಕತೆ | ● ಮಾಸ್ತಿ ವೆಂಕಟೇಶ ಅಯ್ಯಂಗಾರ | 9 |
| ಕೃತಿ ಸಮೀಕ್ಷೆ | ● ಅಹಲ್ಯಾ ಬಲ್ಲಾಳ | 13 |
| ಕರ್ನಾಟಕ ಸಾಂಸ್ಕೃತಿಕ ಪರಂಪರೆ - ೮ | ● ಸುಮಾದ್ವಾರಕಾನಾಥ್ | 14 |
| ಸುತ್ತಮುತ್ತ | | 16 |

The Mysore Association, Mumbai
393. Bhaudaji Road. Matunga. Mumbai-400 019.
Tel.: 402 46 47 ● Grams: "KARUNADU"

ಅಸೋಸಿಯೇಷನ್ನಲ್ಲಿ

# ಮಾಘಿ ಗಣಪತಿ ಪೂಜೆ, ಸತ್ಯನಾರಾಯಣ ಪೂಜೆ ಮತ್ತು ಅಸೋಸಿಯೇಷನ್ನಿನ ಅಮೃತೋತ್ಸವದ ಪ್ರಾರಂಭ



ಅಮೃತೋತ್ಸವದ ಆರಂಭದ ಸಂಕೇತವಾಗಿ ಅಧ್ಯಕ್ಷ ಶ್ರೀ ದೊರೆಸ್ವಾಮಿ ಅವರು ದೀಪವನ್ನು ಬೆಳಗಿಸುತ್ತಿರುವುದು.

ಜನವರಿ ೨೮ರಂದು ಅಸೋಸಿಯೇಷನ್ನಿನಲ್ಲಿ ಮಾಘಿಗಣಪತಿ ಪೂಜೆ ಮತ್ತು ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿತ್ತು. ಮಧ್ಯಾಹ್ನ ೩.೩೦ಕ್ಕೆ ಅಸೋಸಿಯೇಷನ್ನಿನ ಕಾರ್ಯದರ್ಶಿಯಾದ ಶ್ರೀ ಪ್ರಸಾದ್‌ರವರು ಮತ್ತು ಅವರ ಪತ್ನಿ ಶ್ರೀಮತಿ ಭಾರತಿ ಯವರು ಪೂಜೆಯನ್ನು ಪ್ರಾರಂಭಿಸಿದರು. ಮೊದಲು ಗಣಪತಿ ಪೂಜೆಯಾಯಿತು. ನಂತರ ಸತ್ಯನಾರಾಯಣ ಪೂಜೆ ನಡೆಯಿತು. ಅನೇಕ ಸದಸ್ಯರು ಪೂಜೆಯ ಸೇವಾರ್ಥ ಮಾಡಿದರು. ಪೂಜೆಗಳ ನಂತರ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಅಮೃತೋತ್ಸವದ ಆರಂಭದ ಸಂಕೇತವಾಗಿ ದೀಪವನ್ನು ಬೆಳಗಿಸಿದರು ಮತ್ತು ಅಮೃತೋತ್ಸವದ ಕಾರ್ಯಕ್ರಮಗಳಲ್ಲಿ ಎಲ್ಲ ಸದಸ್ಯರೂ ಸಕ್ರಿಯರಾಗಿ ಭಾಗವಹಿಸಬೇಕೆಂದು ವಿನಂತಿಸಿದರು. ನಂತರ ಸದಸ್ಯರಿಂದ ಭಕ್ತಿಸಂಗೀತದ ಕಾರ್ಯಕ್ರಮವಾಯಿತು. ಅದಾದ ನಂತರ ಎಲ್ಲರಿಗೂ ಪ್ರಸಾದ ವಿನಿಯೋಗ ವಾಯಿತು. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದದ್ದು ಪೂಜೆ ಮತ್ತು ಕಾರ್ಯಕ್ರಮಕ್ಕೆ ಕಳೆತಂದಿತು.

---



ಶ್ರೀ ಪ್ರಸಾದ್ ಹಾಗೂ ಶ್ರೀಮತಿ ಭಾರತಿ ಪ್ರಸಾದ್‌ರವರು ಗಣಪತಿ ದೇವರಿಗೆ ಪೂಜೆಯನ್ನು ಮಾಡುತ್ತಿರುವುದು.



ಸಭಿಕರು ಗಣಪತಿಯ ಪೂಜೆಯನ್ನು ವೀಕ್ಷಿಸುತ್ತಿರುವುದು.

## ಶಿವರಾತ್ರಿ ಕಾರ್ಯಕ್ರಮ

ಇದೇ ತಿಂಗಳ 21ನೇ ಬುಧವಾರದಂದು ಸಂಜೆ 7-00 ಘಂಟೆಗೆ ಶಿವರಾತ್ರಿ ಪ್ರಯುಕ್ತ ಅಸೋಸಿಯೇಷನ್ನಿನ ಮಹಿಳಾ ಸದಸ್ಯರಿಂದ ಭಕ್ತಿಗೀತೆಗಳ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ನಂತರ ಪೂಜೆ, ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ. ಎಲ್ಲರಿಗೂ ಆದರದ ಸ್ವಾಗತ

# ನಿಮಗೆ ಇರಲೇಬೇಕಾದ ಕೊಬ್ಬು

ಪ್ರಕಾಶ್ ಜಿ. ಭಟ್

''ಕೊಬ್ಬು ಕೊಬ್ಬೆಂಬ ಬೊಬ್ಬೆಯಲೇನುಂಟು
ಕೊಬ್ಬಿರುವವರೆಲ್ಲ ಹರುಷದಿ ಮತ್ತೆ ಉಬ್ಬಲಿಕ್ಕುಂಟು
ತತ್ತ್ವವೂ, ಸತ್ತ್ವವೂ ಕೊಬ್ಬಿನಲ್ಲುಂಟು
ಕೊಬ್ಬಿಲ್ಲದಿರೆ ನಿತ್ಯದ ಬದುಕು ಎಲ್ಲುಂಟು?''

ಈ ಚುಟುಕು ಹಲವು ರೀತಿಯ ಅರ್ಥವನ್ನೂ, ಗೊಂದಲವನ್ನೂ, ಭಾವವನ್ನೂ ನಿಮ್ಮಲ್ಲಿ ಮೂಡಿಸಿದರೆ ಅದರಲ್ಲಿ ತಪ್ಪಿಲ್ಲ, ಆದರೆ ಲೇಖನದ ತುದಿ ತಲುಪುವಾಗ ಇದು ಹೆಚ್ಚು ಅರ್ಥಪೂರ್ಣವಾಗಿ ನಿಮಗೆ ತೋರಬಹುದು ಎಂಬುದು ನನ್ನ ಅನಿಸಿಕೆ. ''ಅಯ್ಯೋ ಅವಳಿಗೆಷ್ಟು ಕೊಬ್ಬು ನೋಡ.....'' ಎಂಬ ಕನ್ಯಾಮಣಿಗಳ ಮಾತನ್ನು ಅಕ್ಕಪಕ್ಕದಲ್ಲಿ ಯಾರು ತಾನೇ ಕೇಳಿಲ್ಲ? ಇದು ಅವರ ಅಹಂಕಾರದ ಕುರಿತಿರುವ ಮಾತು. ''ಅಬ್ಬಾ... ಕುಳಿತು ತಿಂದು ಹೇಗೆ ಕೊಬ್ಬಿದ್ದಾನೆ.... ನೋಡು'' ಎನ್ನುವ ಮಾತೂ ಇದೆ. ಇದು ವ್ಯಕ್ತಿಯ ಕೆಲಸಕ್ಕೆ ಬಾರದ ಅಳತೆ ಮೀರಿ ಬೆಳೆದ ದಢೂತಿ ದೇಹದ ಕುರಿತಾಡುವ ಮಾತು. ನಮ್ಮ ಆರೋಗ್ಯಕ್ಕೆ ಇವೆರಡೂ ಒಳಿತಿಲ್ಲ ಎಂಬುದು ನಮಗೆಲ್ಲ ಚೆನ್ನಾಗಿಯೇ ಗೊತ್ತು. ನಾನಿಂದು ಹೇಳಹೊರಟಿರುವ ಸುದ್ದಿ ಸಾಮಾನ್ಯವಾಗಿ ನಾವೆಲ್ಲ ನಮ್ಮ ವೈರಿಯೆಂದು ತಿಳಿದಿರುವ, ದೇಹದಲ್ಲಿ ಶೇಖರಣೆಯಾಗುವ ಆಹಾರದ ಒಂದಂಶವಾದ ಕೊಬ್ಬಿನ ಕುರಿತು, ಈ ವಿಚಾರವಾಗಿ ವಿಜ್ಞಾನ ಏನನ್ನುವುದು? ಎಂಬುದರ ಕುರಿತು.

ಬೊಜ್ಜು ಬೆಳೆಸಿ ದೇಹದ ಆಕಾರ ವಿಕಾರಗೊಳಿಸಬಲ್ಲ, ರಕ್ತದ ಒತ್ತಡ, ಹೃದಯದ ಕಾಯಿಲೆಗಳನ್ನು ತರಬಲ್ಲ ಈ ಕೊಬ್ಬನ್ನು ಪ್ರೀತಿಸುವವರಾರು? ಅದರಲ್ಲೂ ಸೌಂದರ್ಯ ಪ್ರಜ್ಞೆಯಿಂದಾಗಿ ಸದಾ ಸ್ಲಿಮ್ ಆಗಿ ಕಾಣಬಯಸುವ ಕನ್ಯಾಮಣಿಗಳಿಗಂತೂ ಇದನ್ನು ಕಂಡರೇ ಅಲರ್ಜಿ! ಅದನ್ನು ಹೊಡೆದೋಡಿಸಲು ಸಾವಿರಾರು ರೂಪಾಯಿ ಖರ್ಚು ಮಾಡುವವರೂ, ಅದರಿಂದ ದೂರವಿರಲು ಉಪವಾಸ - ವನವಾಸ ಮಾಡುವವರೂ, ಅಂತೆಯೇ ವ್ಯಾಯಾಮ, ಕಸರತ್ತು, ಸರ್ಕಸ್ಸುಗಳನ್ನು ಮಾಡುವವರೂ ಎಷ್ಟೋ ಮಂದಿ. ಎಲ್ಲರ ಅನಿಸಿಕೆಯೂ ಕೊಬ್ಬು ಎಂಬ 'ಭೂತ' ಅಪ್ಪಿ ತಪ್ಪಿಯಾದರೂ ತಮ್ಮನ್ನು ತಬ್ಬಿಕೊಳ್ಳಬಾರದು ಎಂಬುದಾಗಿದೆ.

ಇಂದು ಜಗತ್ತಿನಲ್ಲಿ ಈ ಕೊಬ್ಬು ಎಂಬುದು ನಮ್ಮ ಮಿತ್ರನೊ, ಶತ್ರುವೋ ಎಂಬ ಕುರಿತು ಚರ್ಚೆ ಎಲ್ಲೆಲ್ಲೂ ನಡೆಯುತ್ತಿದೆ. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳು, ವಿಶ್ವದಲ್ಲೇ ಅತಿಹೆಚ್ಚು ದ್ವೇಷಕ್ಕೊಳಗಾದ ಈ ಅಂಗಾಂಶವು ಕೇವಲ ಆಲಸ್ಯದ, ಬೊಜ್ಜಿನ ಸಂಕೇತವಲ್ಲ ಬದಲಾಗಿ ನಮ್ಮ ದೇಹದ ದೈನಂದಿನ ಕಾರ್ಯಗಳಲ್ಲಿ, ಆರೋಗ್ಯದ ರಕ್ಷಣೆಯಲ್ಲಿ ಮಹತ್ತರ ಪಾತ್ರವಹಿಸುತ್ತವೆ ಎಂಬುದನ್ನು ದೃಢ ಪಡಿಸಿವೆ. ಆಶ್ಚರ್ಯ ವಾಗುತ್ತಿದೆಯೇ.... ಸ್ವಲ್ಪ ತಾಳಿ, ನಿಮಗೇ ಈಗ ಅದು ಮನವರಿಕೆಯಾಗಲಿದೆ.

**ಕೊಬ್ಬು ಏಕಿರಬೇಕು?**

ನಮ್ಮ ದೈನಂದಿನ ಆಹಾರದ ಭಾಗವಾಗಿರುವ ಶರ್ಕರ, ಪಿಷ್ಟ, ಪ್ರೋಟೀನ್, ವಿಟಾಮಿನ್... ಮುಂತಾದ ಅತ್ಯಾವಶ್ಯ ಅಂಶಗಳಲ್ಲಿ ಕೊಬ್ಬು ಸಹ ಒಂದು. ನಮಗೆಲ್ಲ ತಿಳಿದಿರುವಂತೆ ಹಾಲು, ಮೊಸರು, ಕಾಳುಗಳು, ಎಣ್ಣೆ ಉತ್ಪಾದಿಸಬಲ್ಲ ಬೀಜಗಳಲ್ಲಿ ಇದು ಹೇರಳವಾಗಿ ಲಭಿಸುತ್ತದೆ. ನಮ್ಮ ದೇಹದಲ್ಲಿ ಸುಲಭದಲ್ಲಿ ಸಹಜವಾಗಿ ಸಿಗುವಂತೇ ಶಕ್ತಿ ಸಂಗ್ರವಾಗಿರುವ ರೂಪೆಂದರೆ ಗ್ಲಾಯ್‌ಕೋಜನ್ (Glycogen) ಎಂಬುದು. ಇದು ಗ್ಲುಕೋಸ್‌ನ ಸಹಸ್ರಾರು ಅಣುಗಳ ಸರಪಳಿಯಿಂದ ಮಾಡಲ್ಪಟ್ಟಿದೆ. ಆದರೆ ದೇಹದಲ್ಲಿ ಇದಕ್ಕಿಂತ ದೊಡ್ಡ ಶಕ್ತಿಯ ಕಣಜಗಳಿವೆ. ಅದೇ... ಕೊಬ್ಬು. ಬಹುಜನರು ಇದನ್ನು ಬರಗಾಲಕ್ಕಾಗಿಯೆ ಕಾದಿಟ್ಟ ಆಹಾರದ ಮೂಟೆಯೆಂದು ಪರಿಗಣಿಸುತ್ತಾರೆ. ಆದರೆ ಈಗ ಕಂಡು ಬಂದಿರುವಂತೆ ಕೊಬ್ಬು ಅದಕ್ಕಿಂತ ಹೆಚ್ಚಿನದಾಗಿ ನಮ್ಮಲ್ಲಿ ದೈನಂದಿನ ಕ್ರಿಯೆಗಳನ್ನೂ ಸಂಭಾಳಿಸಿಕೊಂಡು ಹೋಗಬಲ್ಲ ಪರಿಣಿತ ಸಂಘಟಕನಂತೆಯೂ, ಸೇವಕನಂತೆಯೂ ಕಾರ್ಯ ನಿರ್ವಹಿಸುತ್ತದೆಂಬುದು. ಓಕ್ಸ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಮೆಟಾಬೋಲಿಸ್‌ಮ್ ವಿಶೇಷ ತಜ್ಞ ಆಗಿರುವ ಪ್ರೋ. ಕೀತ್ ಫ್ರೆಯ್ನ ಅವರ ಅನಿಸಿಕೆಯಂತೆ ಕೊಬ್ಬು ಎಂಬುದು ನಮ್ಮ ದಿನಸತ್ಯದ ಆಹಾರದ ಏರುಪೇರುಗಳನ್ನು ನೋಡಿಕೊಳ್ಳುವ ಹಾಗೂ ಸರಿದೂಗಿಸಿಕೊಂಡು ಹೋಗುವ ಸಮರ್ಥ ಉಭಯ ಪ್ರತಿರೋಧಿ (Buffer) ಇದ್ದಂತೆ.

**ಎಲ್ಲಿದೆ ಈ ಕೊಬ್ಬು?**

ನಮ್ಮ ದೇಹದಲ್ಲಿ ಕೊಬ್ಬಿನ ಅಂಶವು ಹನಿಹನಿಗಳಾಗಿ ಅಡಿಪೋಸೈಟ್ (adipocyte) ಎಂಬ ಜೀವಕೋಶಗಳಲ್ಲಿ ತುಂಬಿಕೊಂಡಿರುತ್ತದೆ. ಇಂತಹ ಅಸಂಖ್ಯ ಜೀವಕೋಶಗಳು ಸೇರಿ ಗೋಲಾಕಾರದ ಜೇನುಗೂಡಿನಂತಹ ಅಡಿಪೋಸ್ (adipose) ಅಂಗಾಂಶವು ಮಾಡಲ್ಪಟ್ಟಿದೆ. ಇದೇ ನಮ್ಮ ಕೊಬ್ಬು ಸಂಗ್ರಹಣಾ ಕೇಂದ್ರ. ಈ ಅಂಗಾಂಶದ ವಿಶೇಷತೆಯೆಂದರೆ ಇದು ದೇಹದಲ್ಲಿ ಒಂದೆರಡು ಭಾಗಕ್ಕೆ ಸೀಮಿತವಾಗಿರದೇ ಎಲ್ಲೆಲ್ಲೂ ವಿವಿಧ ರೂಪಗಳಲ್ಲಿ ಪಸರಿಸಿದೆ. ಅಂತೆಯೇ ವಿವಿಧ ಕಾರ್ಯದಲ್ಲಿ ಸಹಕರಿಸುತ್ತದೆ. ಇದು ನಮ್ಮ ಚರ್ಮದ ಮೇಲ್ಪದರುಗಳ ಅಡಿಯಲ್ಲಿ (subcutaneous fat), ದೇಹದ ಒಳ ಅಂಗಾಂಗಗಳನ್ನು ಸುತ್ತುವರಿದು, ವಿಶೇಷತಃ ಜೀರ್ಣಾಂಗ ಮೂತ್ರ ಜನಕಾಂಗಗಳನ್ನು ಬಳಸಿ, ಹೊಟ್ಟೆಯನ್ನು ತಬ್ಬಿಕೊಂಡು, ಸೊಂಟ ಹಾಗೂ ಪೃಷ್ಠಭಾಗಗಳನ್ನು ತುಂಬಿಕೊಂಡು, ಕಣ್ಣುಗಳ ಗುಳಿಯಲ್ಲಿ, ಕಾಲಿನ ಹಿಮ್ಮಡಿಯಲ್ಲಿ, ಬೆರಳುಗಳಲ್ಲಿ, ಹಲವಾರು ಮೂಳೆ ಗಂಟುಗಳನ್ನು ಹಿತವಾಗಿ ಅಪ್ಪಿ ಹಿಡಿದು.... ದೇಹದಲ್ಲಿ ಸರ್ವಾಂಗ ವ್ಯಾಪಿಯಾಗಿದೆ. ತನ್ನ ಜೇನುಗೂಡಿನಂತಹ ಆಕಾರದಿಂದಾಗಿ ಅಡಿಪೋಸ್ ಅಂಗಾಂಶವೂ ಎಲ್ಲೆಲ್ಲೂ ದೇಹದ ಅಂಗಾಂಗಗಳಿಗೆ ಹೊರಗಿನಿಂದಾಗ ಬಹುದಾದ ಧಕ್ಕೆಯನ್ನು ತಡೆಯುವಲ್ಲಿ, ಹೀರಿಕೊಂಡು ಅದರ ಪ್ರಭಾವ ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿ ಸಹಕರಿಸುತ್ತವೆ. ಅಷ್ಟೆ ಅಲ್ಲದೆ ಸೂಕ್ಷ್ಮ ನರಗಳ ಜಾಲದಿಂದಾಗಿ, ರಕ್ತನಾಳಗಳ ಪಸರಿಸುವಿಕೆಯಿಂದಾಗಿ, ಎಲ್ಲೆಡೆಗೂಬೇಕಾಗಬಹುದಾದ, ಯಾವತ್ತೂ ಶಕ್ತಿಯನ್ನು ಹಂಚಲು ಕಾದಿರುತ್ತವೆ.

**ಕೊಬ್ಬಿನ ಚೀಲಗಳಿಂದ ಶಕ್ತಿ ಬಿಡುಗಡೆಯಾಗುವ ಬಗೆ**

ನಾವು ಸೇವಿಸಿದ ಆಹಾರದಲ್ಲಿರುವ ಶಕ್ತಿಯ ಅಂಶಗಳು ಎಲ್ಲಿಗೆ ಪೂರೈಕೆಯಾಗಬೇಕೆಂಬುದನ್ನು

ನಮ್ಮ ಯಕೃತ್ತು ಸ್ನಾಯುಗಳು ಹಾಗೂ ಅಡಿಪೋಸ್ ಅಂಗಾಂಶಗಳು ತಮ್ಮಲ್ಲಿಯೇ ನಿರ್ಧರಿಸಿಕೊಳ್ಳುತ್ತವೆ. ದೇಹದಲ್ಲಿನ ಇನ್ಸುಲಿನ್ ಪ್ರಮಾಣ ಹೆಚ್ಚಾದಂತೆ ಅವುಗಳ ತಯಾರಿಕೆಗೆ ಕಾರಣವಾಗುವ ಶರ್ಕರಪಿಷ್ಟಗಳನ್ನು ಯಕೃತ್ತು ಹಾಗೂ ಸ್ನಾಯುಗಳು ಹೀರಿಕೊಳ್ಳಲು ಪ್ರಯತ್ನಿಸುತ್ತವೆ ಹಾಗೂ ರಕ್ತದಲ್ಲಿನ ಕೊಬ್ಬಿನ ಅಂಶವನ್ನು ಅಡಿಪೋಸ್ ಅಂಗಾಂಶವು ಸಂಗ್ರಹಿಸಿಡುತ್ತದೆ. ದೇಹದಲ್ಲಿನ ಇನ್ಸುಲಿನ್ ಪ್ರಮಾಣ ಕಡಿಮೆಯಾದಂತೆ ಅಥವಾ ಯಾವದೇ ಕಾರಣದಿಂದ ನಮ್ಮ ದೇಹವು ಒತ್ತಡಕ್ಕೆ ಪ್ರತ್ಯುತ್ತರ ನೀಡಬೇಕಾದ ಸಂಜ್ಞೆಯನ್ನು ಪಡೆದರೆ (ಉದಾ : ರೋಗಗಳ ವಿರುದ್ಧ ಹೋರಾಡುವಾಗ, ವ್ಯಾಯಾಮ ಮಾಡುವಾಗ) ಅಡಿಪೋಸೈಟ್‌ಗಳಲ್ಲಿರುವ ಕಿಣ್ವಗಳು (Enzymes) ಕೊಬ್ಬಿನ ಹನಿಗಳನ್ನು ಒಡೆದು ಶಕ್ತಿಯನ್ನಾಗಿ ಪರಿವರ್ತಿಸಿ ಪುನಃ ಮುಖ್ಯ ಧಾರೆಗೆ ಹರಿಸುವಲ್ಲಿ ಸಹಕರಿಸುತ್ತವೆ.

### ಕೊಬ್ಬಿನ ವಿಶ್ವರೂಪ ದರ್ಶನ

ಕೊಬ್ಬಿನ ವಿರಾಟ್‌ರೂಪವವನ್ನು, ಅದು ನಮಗಾಗಿ ಮಾಡುವ ಕೆಲಸಗಳೆಲ್ಲವನ್ನೂ ತಿಳಿದಾಗಲೇ ನೋಡಲು ಸಾಧ್ಯ. ಇತ್ತೀಚಿನ ಸಂಶೋಧನೆಯೊಂದರ ಪ್ರಕಾರ ಕೊಬ್ಬು ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ 'ಲೆಪ್ಟಿನ್' ಎಂಬ ಹಾರ್ಮೋನಿನ ಪ್ರಮಾಣಕ್ಕೆ ನೇರ ಕಾರಣವಾಗಿದೆ, ಹಾಗೂ ಅತ್ಯಂತ ಪ್ರಮುಖವಾದ ಈ ಹಾರ್ಮೋನ್ ನಮ್ಮ ದೇಹದ ಆಹಾರದಬೇಕು - ಬೇಡಗಳ ಕುರಿತಾಗಿ ಮಿದುಳಿಗೆ ಸಂದೇಶವನ್ನು ಕಳುಹಿಸುತ್ತದೆ ಎಂಬುದೂ ಸಾಬೀತಾಗಿದೆ. ರಕ್ತದಲ್ಲಿ 'ಲೆಪ್ಟಿನ್' ಪ್ರಮಾಣವನ್ನು ಮಿದುಳಿನ ಹೈಪೋಥಲಾಮಸ್ ಭಾಗವು ಎಚ್ಚರಿಕೆಯಿಂದ ನಿರೀಕ್ಷಣೆ ಮಾಡುತ್ತಿರುತ್ತದೆ. ಈ ಸಂಶೋಧನೆಯೊಂದಿಗೆ ಕೊಬ್ಬಿಗೆ 'ನಿಷ್ಕ್ರಿಯ ಅಂಗಾಂಶ' ಎಂಬ ಹಣೆ ಪಟ್ಟಿಯೂ ತೊಲಗಿದಂತಾಗಿದೆ. ಮುಂದೊಂದು ದಿನ ತಿಂಡಿಪೋತರ ಹೊಟ್ಟೆಬಾಕತನಕ್ಕೆ ಕಡಿವಾಣ ಹಾಕಬಲ್ಲ, ನಿಮಗೆ ಬೇಕೆಂದಾಗ ಹಸಿವೆ ಇಂಗಿಸ ಬಹುದಾದ ಮಾತ್ರೆಗಳು ಪೇಟೆಯಲ್ಲಿ ಬಂದರೆ ಆಶ್ಚರ್ಯಪಡಬೇಡಿ! ಏಕೆಂದರೆ ವಿಜ್ಞಾನಿಗಳು ಈಗಾಗಲೇ ಈ ಹಾರ್ಮೋನ್ ಅಂತಹ ಕೆಲಸ ಮಾಡಬಲ್ಲ ಚಾಣಾಕ್ಷ ಎಂದು ಕಂಡುಕೊಂಡಿದ್ದಾರೆ. ಆ ಮಾತ್ರೆಗಾಗಿ ಕಾಯುವ ಕೊಬ್ಬಿನಿಂದ ಬೇಸತ್ತವರು ಇನ್ನೂ ಸ್ವಲ್ಪ ಸಮಯ ಕಾಯಲೇಬೇಕು. ಏಕೆಂದರೆ ಈ ಹಾರ್ಮೋನ್ ಯಾವ ರೀತಿಯಲ್ಲಿ ಅಥವಾ ಹೇಗೆ ಆ ಕೆಲಸವನ್ನು ಮಾಡುತ್ತದೆಂಬುದು ಅವರಿಗಿನ್ನೂ ತಿಳಿದಿಲ್ಲ.

ಒಂದೆಡೆಯಲ್ಲಿ ನಮ್ಮ ದೇಹವನ್ನು ರೂಪಿಸುವಲ್ಲಿ ನಿರತವಾಗಿರುವ ಕೊಬ್ಬು ಇನ್ನೊಂದೆಡೆಯಲ್ಲಿ ದೇಹದ ಅನಾರೋಗ್ಯದಂತಹ ಆತಂಕದ ಕ್ಷಣಗಳನ್ನು ಎದುರಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ನಮ್ಮ ರಕ್ಷಣಾಪಡೆಯ ಸೈನಿಕರಂತಿರುವ ಬಿಳಿರಕ್ತಕಣಗಳು ಸೈಟೋಕೈನಿನ್ ಎಂಬ ಹಾರ್ಮೋನ್ ಸಂಜ್ಞೆಗಳ ಮೂಲಕ ರಕ್ಷಣಾ ಕಾರ್ಯವನ್ನು ನಿಯಂತ್ರಿಸುತ್ತವೆ. ಲೆಪ್ಟಿನ್ ಸಹ ಇದೇ ವರ್ಗಕ್ಕೆ ಸೇರಿದ ಅಣು ಎಂಬುದು ಗಮನಿಸತಕ್ಕ ಅಂಶ. ನಮ್ಮ ರೋಗ ನಿರೋಧಕ ವ್ಯವಸ್ಥೆಯಲ್ಲಿ ಲೆಪ್ಟಿನ್‌ನ ಪಾತ್ರವಿರುವುದು. ಮುಖ್ಯವಾಗಿ ದೇಹ ಆಹಾರದ ಕೊರತೆಯನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ. ಸಹಜ ಸ್ಥಿತಿಯಲ್ಲಿ ನಮ್ಮ ಶಕ್ತಿಯ ಶೇಕಡಾ ೧೫ ಭಾಗ ರಕ್ಷಣಾ ವ್ಯವಸ್ಥೆಗೆ ಮೀಸಲಾಗಿರುತ್ತದೆ. ಆದರೆ ಆಹಾರ ಪೋಷಕಾಂಶಗಳ ಕೊರತೆಯಿಂದ ಬಳಲುತ್ತಿರುವಾಗ ಅಡಿಪೋಸ್ ಅಂಗಾಂಶವು ದೇಹದ ಅತಿಮುಖ್ಯವಾದ ಕ್ರಿಯೆಗಳನ್ನು ನಡೆಸಲು ಶಕ್ತಿಯ ಉಳಿತಾಯ ಮಾಡಲು ರಕ್ಷಣಾ ವೆಚ್ಚವನ್ನು ಕಡಿಮೆ ಮಾಡುತ್ತದೆ. ಕೊಬ್ಬು ಇದನ್ನು ಹೇಗೆ ನಿಯಂತ್ರಿಸುತ್ತದೆ? ನಮ್ಮ ಅತ್ಯಂತ ಕ್ಲಿಷ್ಟ ಹಾಗೂ ವಿಶಾಲವಾದ ರೋಗನಿರೋಧಕ ರಕ್ಷಣಾ ವ್ಯವಸ್ಥೆಯ ಜೀವಾಳ - ಅದರ ಸಮರ್ಥ ಸಂಘಟಕ, ಸಂಯೋಜಕ, 'ಸಹಾಯಕ - ಟಿ - ಜೀವಕೋಶಗಳು'' (Helper - T- cells). HIV (Human Immuno Virus)ಯಂತಹ ರೋಗಾಣುಗಳ ಆಕ್ರಮಣದ ಸಂದರ್ಭದಲ್ಲಿ ಸಹಾಯಕ - ಟಿ -ಜೀವಕೋಶಗಳು ನಾಶವಾಗುವುದರಿಂದಲೇ ಏಡ್ಸ್‌ನಂತಹ ಭಯಂಕರ ರೋಗಗಳೂ ಬರಬಹುದಾಗಿದೆ. ಇಂತಹ ಟಿ - ಜೀವಕೋಶಗಳ ಮೇಲೆ ಲೆಪ್ಟಿನ್‌ಗಾಗಿಯೇ ಮಾಡಲ್ಪಟ್ಟ ಸ್ಥಾನಗಳಿವೆ. ಲೆಪ್ಟಿನ್ ಅಲ್ಲಿ ಬಂದು ಕುಳಿತಾಗಲೇ (ಸಂಜ್ಞೆ ಸಿಕ್ಕಾಗಲೇ ) ಆ ಜೀವಕೋಶಗಳು ವ್ಯವಸ್ಥಿತವಾಗಿ ರಕ್ಷಣಾಕಾರ್ಯದಲ್ಲಿ ನಿರತವಾಗುತ್ತವೆ. ಅಲ್ಲದೇ ಹೋದರೆ ಅವು ಸ್ತಬ್ಧವಾಗಿ ಕುಳಿತೇ ಬಿಡುತ್ತವೆ. ಹೀಗೆ ಕೊಬ್ಬು ಲೆಪ್ಟಿನ್‌ನನ್ನು ತಡೆಹಿಡಿಯುವ ಮೂಲಕ ರಕ್ಷಣಾಖರ್ಚು, ಜಡತ್ವಗಳನ್ನು ನಿಯಂತ್ರಿಸಬಲ್ಲದು. ಅದಕ್ಕಾಗಿಯೇ ನಮ್ಮಲ್ಲಿ ಸಾಕಷ್ಟು ಕೊಬ್ಬು ಸಂಗ್ರಹವಾಗಿದ್ದರೆ ಅಂತಹ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಆಗಲಾರದು ಎಂಬುದು ನೆನಪಿಡತಕ್ಕ ಅಂಶ.

ಮಿಲ್ಟನ್ ಕೆಯ್ನ್ಸ್ ಮುಕ್ತ ವಿಶ್ವವಿದ್ಯಾಲಯದಲ್ಲಿ ಜೀವಶಾಸ್ತ್ರದ ಪ್ರಾಧ್ಯಾಪಕಿಯಾಗಿರುವ ಕೆರೊಲಿನ್ ಪೊಂಡ್ ಎನ್ನುವಾಕೆ ಅಡಿಪೋಸ್ ಅಂಗಾಂಶದ ಸಂಶೋಧನೆಯಲ್ಲಿ ಹೆಸರು ಮಾಡಿದಾಕೆ. ಅವರ ಅನಿಸಿಕೆಯಂತೆ ನಮ್ಮ ದೇಹದ ಹಲವಾರು ಕಡೆಗಳಲ್ಲಿ 'ಲಿಂಫ್ ನೋಡ್'ಗಳೆಂಬ ಕಾವಲು ಪಡೆಗಳಿದ್ದು ಅವುಗಳನ್ನು ಸುತ್ತುವರಿದ ಅಡಿಪೋಸೈಟ್‌ಗಳು ಆಶ್ಚರ್ಯಕರ ಹಾಗೂ ಅದ್ವಿತೀಯ ರೀತಿಯಲ್ಲಿ, ಹೋರಾಟದಲ್ಲಿ ನಿರತವಾದ ಬಿಳಿರಕ್ತಕಣಗಳು ನೀಡುವ ಸಂಕೇತಗಳನ್ನು ಗ್ರಹಿಸಿ ಅದಕ್ಕೆ ಪೂರಕವಾದ ರೀತಿಯಲ್ಲಿ ಪ್ರವರ್ತಿಸುತ್ತವೆ ಹಾಗೂ ಹೋರಾಟದಲ್ಲಿ ಸಹಕರಿಸುತ್ತವೆ.

ನಮ್ಮ ಕೊಬ್ಬಿನ ಕಥೆಯ ಪ್ರಮುಖ ಪಾತ್ರಧಾರಿಯಾದ ಲೆಪ್ಟಿನ್ ಎಂಬ ಹೊಸ ಹಾರ್ಮೋನು ವ್ಯವಸ್ಥೆಯನ್ನು ಕಂಡು ಹಿಡಿಯುವವರಲ್ಲಿ ಪ್ರಮುಖವಾದ ವಿಜ್ಞಾನಿ ನ್ಯೂಯಾರ್ಕಿನ ರಾಕೆಫೆಲ್ಲರ ವಿಶ್ವವಿದ್ಯಾಲಯದ ಪ್ರೊ. ಜೆಫ್ರಿ ಫ್ರೀಡ್‌ಮನ್ ಎಂಬವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೊಬ್ಬು ನಮ್ಮ ಮನಸ್ಸಿನ 'ಮೂಡ್'ಗಳನ್ನು ನಿರ್ಧರಿಸುವಲ್ಲಿ ಸಹ ಪ್ರಭಾವ ಬೀರಬಲ್ಲದು ಎನ್ನುತ್ತಾರೆ. ಲೆಪ್ಟಿನ್‌ನನ್ನು ಗ್ರಹಿಸಲಿಕ್ಕಾಗಿಯೇ ಮಿದುಳಿನಲ್ಲಿ ಹಲವಾರು ಕೇಂದ್ರಗಳಿವೆ ಎಂಬುದೂ ಈಗ ತಿಳಿದು ಬಂದಿದೆ.

### ಸ್ತ್ರೀಯರಿಗೇಕೆ ಕೊಬ್ಬು ಹೆಚ್ಚು?

ಸ್ತ್ರೀಯರನ್ನು ಕಂಡರೆ ಕೊಬ್ಬಿಗೆ ಪ್ರೀತಿಯೆ... ಅಥವಾ ಕೊಬ್ಬೆಂದರೆ ಸ್ತ್ರೀಯರಿಗೆ ಇಷ್ಟವೆ? ಅದೇನೋ ತಿಳಿದಿಲ್ಲ, ಆದರೆ ಸ್ತ್ರೀಯರಲ್ಲಿ ಪುರುಷರಿಗಿಂತ ಕೊಬ್ಬು ಹೆಚ್ಚಿರುವುದೆಂದು ವಿಜ್ಞಾನ ಹೇಳುತ್ತದೆ ! ಪುರುಷರಲ್ಲಿ ಅವರ ದೇಹ ತೂಕದ ಶೇಕಡಾ 10-15 ರಷ್ಟು ಕೊಬ್ಬಿದ್ದರೆ ಸ್ತ್ರೀಯರಲ್ಲಿ ಅದು ಶೇಕಡಾ 15ರಿಂದ 20ರಷ್ಟಂತೆ. ಜಗತ್ತಿನ ಜೀವಕೋಟಿಗಳನ್ನು ಹೊತ್ತು, ಹೆತ್ತು, ಸಾಕಿ ಸಲಹಿ, ಜೀವನವನ್ನು ಮುನ್ನಡೆಸುವ ಮಹತ್ವದ ಜವಾಬ್ದಾರಿ ನಿರ್ವಹಿಸುತ್ತಿರುವ ಸ್ತ್ರೀ ಶಕ್ತಿಗೆ ಇದು ಅತ್ಯಂತ ಸಹಜವೂ ಸಮಂಜಸವೂ ಅವಶ್ಯವೂ ಆಗಿದೆ ಅಂದರೆ ತಪ್ಪಿಲ್ಲ. ಏಕೆಂದರೆ ಸ್ತ್ರೀಯರಲ್ಲಿ ದೇಹದ ಕೊಬ್ಬಿನ

ಅಂಶಕ್ಕೂ ವಂಶಾಭಿವೃದ್ಧಿಗೆ ಸಂಬಂಧಿಸಿದ ಅನೇಕ ಪ್ರಕ್ರಿಯೆಗಳಿಗೂ ನಿಕಟ ಸಂಬಂಧ ಇರುವುದು ತಿಳಿದು ಬಂದಿದೆ.

ಕೇಂಬ್ರಿಜ್ ವಿಶ್ವವಿದ್ಯಾಲಯದ ಅಡಿಪೋಸ್ ಅಂಗಾಂಶ ಅಧ್ಯಯನದ ವಿಶೇಷಜ್ಞರಾಗಿರುವ ಒರಾಹೀಂ ಅವರು ಈ ವಿಚಾರದಲ್ಲಿ ಹಲವಾರು ಅಂಶಗಳನ್ನು ಕಂಡುಕೊಂಡಿದ್ದಾರೆ. ಸ್ತ್ರೀಯರ ಗರ್ಭಧಾರಣೆ ಹಾಗು ಮಗುವಿನ ಲಾಲನೆ ಪಾಲನೆ ಸಂದರ್ಭದಲ್ಲಿ ನಿಧಾನವಾಗಿ ಹಾಗೂ ನಿರಂತರವಾಗಿ ಸಾಕಷ್ಟು ಶಕ್ತಿಯ ಅವಶ್ಯಕತೆಯಿದ್ದು ಅದನ್ನು ಚರ್ಮದ ಅಡಿಯಲ್ಲಿರುವ ಕೊಬ್ಬಿನ ಪದರು ಪೂರೈಸುತ್ತದೆ. ಅದೇ ಪುರುಷರಲ್ಲಾದರೆ ಹೊಟ್ಟೆಭಾಗದಲ್ಲಿರುವ ಕೊಬ್ಬು ಹೆಚ್ಚು ಕ್ರಿಯಾಶೀಲವಾಗಿರುತ್ತದೆ ಎಂದು ಹೇಳಲಾಗಿದೆ. ತಾಯ್ತನವನ್ನು ಬಯಸುವ ಸ್ತ್ರೀಯರಲ್ಲಿ ಸಾಕಷ್ಟು ಶಕ್ತಿ ಸಂಗ್ರಹವಾಗಿರಬೇಕಾದುದು ಅತ್ಯಂತ ಅವಶ್ಯ. ಇಲ್ಲದಿದ್ದರೆ ಗರ್ಭಧರಿಸಿದ ತಾಯಿ ಹಾಗೂ ಒಳಗಿರುವ ಮಗು ಇಬ್ಬರಿಗೂ ಅಪಾಯವಿದೆ. ಗರ್ಭಿಣಿಯರ ಆರೈಕೆ ಬಾಳಂತಿಯರ ಆಳ್ವಿಕೆಗೆ ನಾವು ನೀಡುವ ಪ್ರಾಮುಖ್ಯತೆ ಇದನ್ನೆಲ್ಲ ಪುಷ್ಟೀಕರಿಸುತ್ತದೆ.

ಸ್ತ್ರೀಯರಲ್ಲಿ ಕೊಬ್ಬು ಅವರ ಮಾಸಿಕ ಮುಟ್ಟು ನಿಲ್ಲುವಂತಹ ಕೊನೆಯ ದಿನಗಳಲ್ಲೂ (Meno pause) ಮಹತ್ವದ ಸಹಾಯಹಸ್ತ ಚಾಚುತ್ತದೆ. ಅಡಿಪೋಸ್ ಅಂಗಾಂಶವು ಅವರ ಲೈಂಗಿಕ ಜೀವನಕ್ಕೆ ಉಪಯುಕ್ತ ಹಾರ್ಮೋನ್‌ಗಳನ್ನು ಅವುಗಳ ಮೂಲ ರೂಪದಿಂದ ಕ್ರಿಯಾತ್ಮಕ ರೂಪಕ್ಕೆ ಬದಲಾಯಿಸುತ್ತದೆ. ಅಂತೆಯೇ ಅದು ಸ್ತ್ರೀಯರಲ್ಲಿ ಮುಟ್ಟು ನಿಂತ ಮೇಲೆ ಎಲುಬುಗಳನ್ನು ಸಂರಕ್ಷಿಸಿಕೊಂಡು ಹೋಗಲು ಬೇಕಾದ ಹಾರ್ಮೋನ್‌ಗಳ ಪೂರೈಕೆಯ ಕೇಂದ್ರವು ಹೌದು. ಆದರೆ ಇಲ್ಲಿ ನೆನಪಿಡಬೇಕಾದ ಒಂದು ಅಂಶವೂ ಇದೆ. ಅದೇ ಈ ವ್ಯವಸ್ಥೆಯ ಆತಂಕಕಾರೀ ಮುಖ! ಅತಿಯಾದ ಕೊಬ್ಬು ಸ್ತ್ರೀಯರನ್ನು ಹಾರ್ಮೋನ್ ಸಂಬೇದಿ ಕ್ಯಾನ್ಸರ್‌ಗಳಾದ ಸ್ತನ ಹಾಗೂ ಪಿತ್ತಕೋಶದ ಕ್ಯಾನ್ಸರ್‌ಗಳಿಗೆ ಸ್ವಲ್ಪ ಹತ್ತಿರವಾಗುವಂತೆ ಮಾಡಬಲ್ಲವು.

ಕೊಬ್ಬಿನ ಕೊರತೆ ದೇಹದಲ್ಲಿ ಹಲವಾರು ತೊಂದರೆಗಳಿಗೆ ಕಾರಣವಾಗಬಹುದು. ಒರಾಹಿಲಿಂ ಅವರ ಅನಿಸಿಕೆಯಂತೆ ಲೆಪ್ಟಿನ್ನಿನ ಕೊರತೆಯೊಂದಿಗೆ ಹುಟ್ಟುವ ಹೆಣ್ಣು ಮಕ್ಕಳು ಗರ್ಭಧಾರಣೆ ಶಕ್ತಿಯನ್ನು ಹೊಂದಿರುವುದಿಲ್ಲ ಅಷ್ಟೇ ಅಲ್ಲ ತಮ್ಮ ಸಹಜ ಸುಂದರ ತಾರುಣ್ಯಾವಸ್ಥೆಯನ್ನೂ ನೋಡಲಾರರು. ಅಂತಹ ಮಗುವಿನಲ್ಲಿ ಕೊರತೆಯನ್ನು ನೀಗಿಸಿದರೆ ಸಹಜತೆ ಉಳಿಸಲು ಸಾಧ್ಯ ಎಂದೂ ಅವರು ತೋರಿಸಿದ್ದಾರೆ. ಅತ್ಯಂತ ಕಡಿಮೆ ಕೊಬ್ಬು ಇರುವ ಸ್ತ್ರೀಯರಲ್ಲಿ ಮಾಸಿಕ ಮುಟ್ಟಿನ ದಿನಗಳೂ ಕಾಣಿಸಿಕೊಳ್ಳದಿರಬಹುದು. ಬೆಳೆಯುವ ಗರ್ಭಕ್ಕೆ ಬೇಕಾದ ಅಪಾರ ಪೌಷ್ಟಿಕಾಂಶ ಶಕ್ತಿಯನ್ನು ಅಂತಹ ಸ್ತ್ರೀಯರು ಭರಿಸಲಾರರು ಎಂಬುದಕ್ಕೆ ದೇಹವೇ ನೈಸರ್ಗಿಕವಾಗಿ ಈ ಮುಂಜಾಗರೂಕತೆ ವಹಿಸುವುದೇ ಎಂದೂ ಅನ್ನಿಸದಿರದು. ಪುರುಷರಲ್ಲಿ ಸಹ ಕೊಬ್ಬು ಪ್ರತಾಪ ತೋರದೇ ಬಿಟ್ಟಿಲ್ಲ ಲೆಪ್ಟಿನ್‌ನ ಕೊರತೆ ಅವರಲ್ಲೂ ಸಾಹಸ - ಶಕ್ತಿ - ಉತ್ಸಾಹ ಭರಿತ ತಾರುಣ್ಯವನ್ನು ಕುಗ್ಗುವಂತೇ ಮಾಡಬಲ್ಲದು. ಅದರ ಅತೀವ ಕೊರತೆಯಿಂದ (ಅತ್ಯಂತ ವಿರಳವಾಗಿ ಕಂಡು ಬರುವಂತೆ) ಪುರುಷರು ಲೈಂಗಿಕ ಪ್ರೌಢತೆ ತಲುಪವು ವಿಫಲರಾಗುತ್ತಾರೆ. ಬೆರಾರ್ಡಿನೆಲ್ಲಿ - ಸೀಪ್ ಸಿಂಡ್ರೋಮ್ (Berardinelliseip - Syndrome) ಎಂಬ ವಿರಳವಾದ ಅವಸ್ಥೆಯೊಂದಿಗೆ ಹುಟ್ಟುವವರಲ್ಲಿ ಒಂದೆರಡು ಕೊಬ್ಬಿನ ತುಣುಕುಗಳನ್ನು ಬಿಟ್ಟರೆ ಕೊಬ್ಬಿನ ಸಂಗ್ರಹದ ಜೀವಕೋಶಗಳೇ ಇರುವುದಿಲ್ಲ. ಅಂತಹವರಲ್ಲಿ ತಿಂದ ಕೊಬ್ಬಿನ ಅಂಶವೆಲ್ಲ ಯಕೃತ್ತಿಗೂ, ಮಾಂಸಖಂಡಗಳಿಗೂ ಹೋಗಿ ಅವನ್ನು ಹಾಳು ಮಾಡುತ್ತವೆ ಹಾಗೂ ಸಿಹಿಮೂತ್ರದಂತಹ ರೋಗಕ್ಕೆ ಕಾರಣವಾಗುತ್ತವೆ.

ಇದನ್ನೆಲ್ಲ ಕಾಣುವಾಗ ನಮಗೆ ಎಂತಹ ಸಂಕೀರ್ಣವಾದ ಮಾನವ ಶರೀರದಲ್ಲಿ ಅದೆಂತಹ ಸುವ್ಯವಸ್ಥೆ ಎಂಬ ಆಶ್ಚರ್ಯ, ಕೌತುಕ ಹಾಗೂ ಹೆಮ್ಮೆಯೂ ಮೂಡದಿರದು ಅಲ್ಲವೆ? ಇಂತಹ ನಿಗೂಢವನ್ನು ಬೇಧಿಸುತ್ತ, ಆಳದಿಂದಾಳಕ್ಕೆ ಇಳಿಯುತ್ತ, ಸಕಲ ವಸ್ತು- ಸ್ಥಿತಿಗಳ ಮೂಲರೂಪ ಅಣು - ಪರಮಾಣುವಿನ ವಿಶ್ವರೂಪದರ್ಶನ ಮಾಡಿಸುವಂತಹ ವಿಜ್ಞಾನದ ಮಹಿಮೆಯನ್ನು ಹಾಡೋಣವೆ? ಅಥವಾ ಮಾನವನನ್ನು ಯಾವುದೇ ಸನ್ನಿವೇಶಕ್ಕೆ ಹೊಂದಿಕೊಳ್ಳಲು ಸಮರ್ಥವಾಗುವಂತೇ ಬೆಳೆಸುವ ನಿಸರ್ಗವನ್ನು ಹೊಗಳೋಣವೆ? ಎಲ್ಲಿಯವರೆಗೆ ಆ ಎರಡೂ ಆಧಾರ ಸ್ತಂಭಗಳು ಒಂದಕ್ಕೊಂದು ಪೂರಕವಾಗಿ ನಿಂತಿರುವವೋ ಅಲ್ಲಿಯವರೆಗೆ ಅವೆರಡೂ ನಮಗೆ ಪ್ರಾಮುಖ್ಯವೇ ಆಗಿವೆ

ಇಂತಹ ಪ್ರಮುಖ ಬಹುಮುಖ ಪ್ರತಿಭೆಯ ಅಂಗಾಂಶವಾದ ಕೊಬ್ಬನ್ನು ವಿಜ್ಞಾನಿಗಳು ಸಮರ್ಥ ನಾಯಕನ ಪಟ್ಟಕ್ಕೇರಿಸಿರುವುದು ಅತಿಶಯವೇನಲ್ಲ. ಬಹುಶಃ ನಾವಿಂದು ಕೊಬ್ಬನ್ನು ನಮ್ಮ ಹಿತೈಷಿಯ ರೂಪದಲ್ಲಿ ಸ್ವೀಕರಿಸದೆ ಅನ್ಯ ಮಾರ್ಗವಿಲ್ಲ. ಇಷ್ಟೆಲ್ಲ ಸಂಶೋಧನೆಗಳ ನಡುವೆಯೂ ಎಲ್ಲರಲ್ಲಿ ಕೊಬ್ಬಿನ ಕುರಿತಾಗಿ ಅತ್ಯಂತ ಕ್ಲಿಷ್ಟವಾದ ಅಸ್ಪಷ್ಟವಾದ ಚಿತ್ರಣವೇ ಇದೆ. ಏಕೆಂದರೆ ಅತಿಯಾದ ಕೊಬ್ಬಿನ ಶೇಖರಣೆಯಿಂದಾಗಿ ಹೃದಯಾಘಾತ, ಸಿಹಿಮೂತ್ರ ಮುಂತಾದ ರೋಗದ ಸಾಧ್ಯತೆಗಳು ಹೆಚ್ಚು ಎಂಬುದು ಇಂದಿಗೂ ಸತ್ಯವಾದ ವಿಚಾರ ! ಹಾಗೆಂದು ಹೇಳಿ ಸಾರಾಸಗಟಾಗಿ ಅದನ್ನು ನಿಂದಿಸುವುದೂ ತರವಲ್ಲ ಅಲ್ಲವೆ?

ಏನೇ ಇರಲಿ, ಹಿತವಾದ ಕೊಬ್ಬು ದುರ್ಭಾಗ್ಯವಲ್ಲ ಆದರೆ ಭಾಗ್ಯ, ಕುರೂಪವಲ್ಲ ಆದರೆ ಸುರೂಪ, ವೈರಿಯಲ್ಲ ಆದರೆ ಹಿತೈಷಿ ಎಂದು ತಬ್ಬಿಕೊಳ್ಳಲು ಏನೂ ಅನುಮಾನ ಬೇಡ; ಮುನ್ನುಗ್ಗಿ.

ಗಮನಿಸಿ : ಈ ಲೇಖನವನ್ನು 'ನ್ಯೂ ಸೈಂಟಿಸ್ಟ್' ಎಂಬ ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟವಾದ ಮೂಲ ಲೇಖನದ ಆಧಾರದ ಮೇಲೆ ತಯಾರಿಸಲಾಗಿದೆ.

FOR ALL YOUR DOMESTIC AND INTERNATIONAL TRAVEL ARRANGEMENTS

*CONTACT*

**AUGUST TRAVEL SERVICE**

Agents For
INDIAN AIRLINES &
JET AIRLINES

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# ವಿಶಿಷ್ಟ ಕಾದಂಬರಿಕಾರ - ಕುಸುಮಾಕರ

ಕನ್ನಡ ಕಾದಂಬರಿ ಲೋಕದಲ್ಲಿ ಡಾ. ವಸಂತ ಎ, ದಿವಾಣಜಿ ಅವರಿಗೆ ವಿಶಿಷ್ಟ ಸ್ಥಾನಮಾನವಿದೆ. ಅವರ ನಿರಿಂದ್ರಿಯ ಹಾಗೂ ನಾಲ್ಕನೆಯ ಆಯಾಮ ಕಾದಂಬರಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಪ್ರಾಪ್ತವಾಗಿತ್ತು. ಕುಸುಮಾಕರ ದೇವರ ಗೆಣ್ಣೂರ ಎಂಬ ಅಂಕಿತದಿಂದ ಸಾಹಿತ್ಯಕೃಷಿ ನಡೆಸಿದ ದಿವಾಣಜಿ ಅವರಿಗೆ ಈಗ ಎಪ್ಪತ್ತರ ಪ್ರಾಯ. ಹೊರನಾಡಿನಲ್ಲಿದ್ದುಕೊಂಡು (ಸೊಲ್ಲಾಪುರದಲ್ಲಿ) ಅವರು ಅಲ್ಲಿ ಕನ್ನಡವನ್ನು ಮುನ್ನಡೆಸಿದವರು. ಅವರ ಸಾಹಿತ್ಯ ಸಾಧನೆಯ ಸಮೀಕ್ಷೆ ಇಲ್ಲಿದೆ.

ಕನ್ನಡ ಸಾಹಿತ್ಯಲೋಕದಲ್ಲಿ ಕುಸುಮಾಕರ ದೇವರಗೆಣ್ಣೂರ ಅವರಿಗೆ ವಿಶಿಷ್ಟವಾದ ಸ್ಥಾನಮಾನವಿದೆ. ಕವಿಯಾಗಿ, ಪ್ರಾಧ್ಯಾಪಕರಾಗಿ, ಕಾದಂಬರಿಕಾರರಾಗಿ, ಅನುವಾದಕರಾಗಿ ಕನ್ನಡವನ್ನು ಮುನ್ನಡೆಸಿದ ಹಿರಿಯ ಲೇಖಕರಲ್ಲಿ ಅವರೂ ಒಬ್ಬರು. ಕುಸುಮಾಕರ ದೇವರಗೆಣ್ಣೂರರ ಬರಹ ಸಂಖ್ಯೆ ಎರಡರ ನಿಟ್ಟಿನಿಂದಲೂ ಗಮನಾರ್ಹವಾದುದಾಗಿದೆ, ಕುಸುಮಾಕರ ದೇವರ ಗೆಣ್ಣೂರ ಕಾವ್ಯನಾಮ ಅವರ ಬರವಣಿಗೆಯ ಅಂಕಿತ ವಸಂತ ಅನಂತ ದಿವಾಣಜಿ ಅವರ ನಾಮಧೇಯ. ಎರಡೂ ಹೆಸರುಗಳಿಂದ ಇವರು ಕನ್ನಡದಲ್ಲಿ ಸಾಹಿತ್ಯ ಸೃಷ್ಟಿಸಿದ್ದಾರೆ.

ಕುಸುಮಾಕರರು 1930ರಲ್ಲಿ ವಿಜಾಪುರ ಜಿಲ್ಲೆಯ ದೇವರ ಗೆಣ್ಣೂರಿನಲ್ಲಿ ಜನಿಸಿದರು. ಕೆಳಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆದ ಅವರ ಆರಂಭದ ಶಿಕ್ಷಣ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ನಡೆಯಿತು. ಈ ನಡುವೆ ಅವರ ತಂದೆಯವರು ಸೊಲ್ಲಾಪುರಕ್ಕೆ ಉದರ ನಿಮಿತ್ತವಾಗಿ ಬಂದರು. ಬಾಲಕ ವಸಂತ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಸೊಲ್ಲಾಪುರಕ್ಕೆ ಬರುವಂತಾಯಿತು. ಯೋಗಾಯೋಗವೋ ಎನ್ನುವಂತೆ ವಸಂತನಿಗೆ ಬಾಲ್ಯದಲ್ಲೇ ಬೇಂದ್ರೆಯವರ ಒಡನಾಟ ಸಿಕ್ಕಿತು. ಸುಮಾರು ಹನ್ನೆರಡು ವರ್ಷ ಬೇಂದ್ರೆಯವರ ಮನೆಯ ಹುಡುಗನಾಗಿ, ನೆಚ್ಚಿನ ವಿದ್ಯಾರ್ಥಿಯಾಗಿ ಬೆಳೆದರು. ಸಾಹಿತ್ಯದ ಇಂಪುಕಂಪಿನ ರುಚಿಶುದ್ಧಿ ಅವರಿಗಾಯಿತು. ಬೇಂದ್ರೆಯವರ ಮುಕ್ತ ವಿದ್ಯಾಪೀಠದಲ್ಲಿ ಅವರ ಸಾಹಿತ್ಯ ಕೃಷಿಗೆ ಹೊಸದೀಕ್ಷೆ ದೊರೆಯಿತು.

ಓದು ಅಂದರೆ ಬರಿ ಓದಲ್ಲ, ಬರವಣಿಗೆ ಅಂದರೆ ಬರಿ ಶಬ್ದಗಳ ಆಡಂಬರ ಅಲ್ಲ,ಕಣ್ಣು ಕಿವಿ ತೆರೆದು ಜಗತ್ತನ್ನು ನೋಡುವ ದೃಷ್ಟಿಕೊಟ್ಟರು ಬೇಂದ್ರೆ'' ಎಂದು ಕೃತಜ್ಞತೆಯಿಂದ ಸದೈವ ನೆನೆಯುತ್ತಾರೆ ದಿವಾಣಜಿ.

ಹದಿನೆಂಟರ ಹರೆಯದಲ್ಲಿಯೇ ತಾವು ಓದಿದ ಹೈಸ್ಕೂಲಿನಲ್ಲಿಯೇ ಅವರು ಶಿಕ್ಷಕರಾಗಿ ನೇಮಕಗೊಂಡರು. ಬೇಂದ್ರೆ ಅವರ ಮಾರ್ಗದರ್ಶನದಲ್ಲಿ ಎಂ.ಎ. ಮುಗಿಸಿ ಸೊಲ್ಲಾಪುರದ ದಯಾನಂದ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಅನಂತರ ಸೇರಿಕೊಂಡರು. ಇದು ಅವರ ಸಾಹಿತ್ಯ ಕೃಷಿಗೆ ಮತ್ತಷ್ಟು ಪುಷ್ಟಿಯನ್ನೊದಗಿಸಿತು. ದಿವಾಣಜಿ ಅವರ ಅಧ್ಯಯನದ ಹರಸು ದೊಡ್ಡದು. ತತ್ವಜ್ಞಾನ, ಸಾಹಿತ್ಯ, ಸಾಮಾಜಿಕ ವಿಜ್ಞಾನ, ಹೋಮಿಯೋಪಥಿ, ಮಾನವಶಾಸ್ತ್ರ, ಅರವಿಂದರ ಹಾಗೂ ಜೇ. ಕೆ. ಅವರ ವಿಚಾರಗಳು ಅವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಹಳೆಯ ತಲೆಮಾರಿನ ವಿದ್ವಾಂಸ, ಕವಿಗಳಲ್ಲಿರುವಂತೆ ಆಳವಾದ ಚಿಂತನೆ, ದರ್ಶನಗಳಿಂದ, ವಿಚಾರ ವಿಮರ್ಶೆಗಳಿಂದ ಅವರ ಕೃತಿಗಳು ಮೇಲ್ತರಗತಿಯವೆನ್ನಿಸಿವೆ. ಅವರ ಎಪ್ಪತ್ತು ವರ್ಷಗಳ ತುಂಬು ಜೀವನದಲ್ಲಿ ಕೃತಿಗಳ ಸಂಖ್ಯೆಗೆ ಬೆಲೆಕೊಡದೆ ಗುಣಗ್ರಾಹ್ಯತೆಗೆ ಆದ್ಯತೆ ನೀಡಿದ್ದಾರೆ. ಮನುಷ್ಯನ ಸ್ವಭಾವದ ಬೆಳವಣಿಗೆ ಮತ್ತು ಅವನ ಮೌಲ್ಯ ಶ್ರೇಣಿಗಳನ್ನು ಅವನ ಸಾಮಾಜಿಕ ಮತ್ತು ಆರ್ಥಿಕ ಆವರಣ ಎಷ್ಟರ ಮಟ್ಟಿಗೆ ನಿರ್ಧರಿಸುತ್ತದೆ ಎಂಬುದನ್ನು ಗುರುತಿಸಿದ ಕಾದಂಬರಿಕಾರರಲ್ಲಿ ಕುಸುಮಾಕರ ದೇವರಗೆಣ್ಣೂರ ಅವರೂ ಒಬ್ಬರು.

ಕುಸುಮಾಕರ ದೇವರಗೆಣ್ಣೂರ ಕಾವ್ಯನಾಮ ದಿಂದ ದಿವಾಣಜಿ ಅವರು 'ಸ್ವಪ್ನ ನೌಕೆ' ಎಂಬ ಕವನ ಸಂಕಲನವನ್ನು 1964ರಲ್ಲಿ ಪ್ರಕಟಿಸಿದರು. ಇದು ಅವರ ಚೊಚ್ಚಲ ಕೃತಿ. ಪರಿಶುದ್ಧವಾದ ಪ್ರೇಮವೇ ಜೀವಾಳವಾಗಿರುವ ಈ ಕೃತಿ ನವೋದಯ ಸಾಹಿತ್ಯದ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಈ ಕೃತಿಯ ಮುನ್ನುಡಿಯಲ್ಲಿ ದಿವಾಣಜಿ ಅವರ ಪ್ರತಿಭೆಯನ್ನು ರಂ. ಶ್ರೀ ಮುಗಳಿ ಅವರು ಅಂದೇ ಸರಿಯಾಗಿ ಗುರುತಿಸಿದ್ದರು.

### ಕಾದಂಬರಿ ಕ್ಷೇತ್ರದಲ್ಲಿ ಕಂಡ ಯಶಸ್ಸು

ತನ್ನ ಅನಿಸಿಕೆ, ಅನುಭವಗಳನ್ನು ಸಶಕ್ತವಾಗಿ ಅಭಿವ್ಯಕ್ತ ಪಡಿಸಲು ಕಾದಂಬರಿಯೇ ಸರಿಯಾದ ಮಾರ್ಗ ಎಂಬುದನ್ನು ಕುಸುಮಾಕರರು ಬಹುಬೇಗ ಕಂಡುಕೊಂಡರು. 1965ರಲ್ಲಿ ಅವರ ಮೊದಲ ಕಾದಂಬರಿ ಮುಗಿಯದ ಕತೆ ಪ್ರಕಟವಾಯಿತು. ಇತರ ನವೋದಯ ಕಾದಂಬರಿಗಳಿಗಿಂತ ಇದು ತುಸು ಭಿನ್ನ ರೀತಿಯಲ್ಲಿ ಮೈ ಪಡೆದಿದೆ. ವ್ಯಕ್ತಿಯ ಅಂತರಂಗದ, ಮನೋವಿಶ್ಲೇಷಣಾತ್ಮಕ ವಿಚಾರಗಳಿಗೆ ಹೆಚ್ಚು ಒತ್ತು ನೀಡಿದ್ದಾರೆ. ಇದರ ಇನ್ನೊಂದು ಮುಖವನ್ನು 'ನಾಲ್ಕನೆಯ ಆಯಾಮ' ಕಾದಂಬರಿಯಲ್ಲಿ ಕಾಣುತ್ತೇವೆ. ಇದು 1966ರಲ್ಲಿ ಬೆಳಕು ಕಂಡಿತು. ಸ್ವಾತಂತ್ರ್ಯೋತ್ತರ ದಿನಮಾನದಲ್ಲಿ ಶ್ರೇಯ ಪ್ರೇಯಗಳ ಸಂಘರ್ಷದಲ್ಲಿ ಸಿಲುಕಿದ ವಿದ್ಯಾರ್ಥಿಯ ಸುತ್ತ ನೇಯ್ದ ಕಥಾವಸ್ತುವನ್ನು ಈ ಕಾದಂಬರಿ ಒಳಗೊಂಡಿದೆ. ಕನ್ನಡದಲ್ಲಿ ಈ ಮಾದರಿಯ ಕಾದಂಬರಿಗಳು ಅಷ್ಟಾಗಿ ಬಂದಿಲ್ಲ. ಮರಾಠಿ ಕಾದಂಬರಿಕಾರ ಬಾಲಚಂದ್ರ ನೆಮಾಡೆ ಅವರ ಕೋಸಲಾ ಕಾದಂಬರಿಯನ್ನು ನಾಲ್ಕನೆಯ ಆಯಾಮದ ಜೊತೆಗಿಟ್ಟು ತೌಲನಿಕವಾಗಿ ನೋಡಬಹುದಾಗಿದೆ. ತಂತ್ರದ ದೃಷ್ಟಿಯಿಂದ ಗಟ್ಟಿಯಾಗಿರುವ ಈ ಕಾದಂಬರಿ ದಿವಾಣಜಿ ಅವರಿಗೆ ಸಾಕಷ್ಟು ಪ್ರಸಿದ್ಧಿಯನ್ನು ತಂದುಕೊಟ್ಟಿತು. ನಿರಿಂದ್ರಿಯ ಅವರ ಮತ್ತೊಂದು ಮಹತ್ವದ ಕಾದಂಬರಿ. ಜೀವನದ ನೇರ ಸಂಘರ್ಷದಿಂದ ವಂಚಿತನಾದ ವ್ಯಕ್ತಿ ಜೀವನದ ಸಂಧಿ ಕಾಲದಲ್ಲಿ ಆಕಸ್ಮಿಕವಾಗಿ ಬದುಕಿನ ಸಂಸ್ಪರ್ಶದಲ್ಲಿ ಬಂದಾಗ ಆಯ್ದುಕೊಳ್ಳುವ ದಾರಿ ಹಾಗೂ ಅದರಿಂದುಟಾದ ಪರಿಣಾಮವನ್ನು ನಿರಿಂದ್ರಿಯ ಕಾದಂಬರಿಯಲ್ಲಿ ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

ದಿವಾಣಜಿ ಅವರ ಮತ್ತೊಂದು ಕಾದಂಬರಿ 'ಪರಿಘ' ಯಾವುದೋ ಒಂದು ಪ್ರಮೇಯವನ್ನು ಹಿಡಿದು ಅದರ ಸುತ್ತ ಹೆಣೆದ ಕತೆ ಇದಲ್ಲ. ಇದು ಬದುಕಿನ ವಿರಾಟ ಸ್ವರೂಪದ ವಾಸ್ತವದರ್ಶನವನ್ನು ಮಾಡಿಕೊಡುತ್ತದೆ. ಬದುಕಿನ ಜಂಜಡದಲ್ಲಿ ಸಿಕ್ಕಿ ಹೊರಬರಲು ಹೆಣಗುವ ಮತ್ತೂ ಆಳಕ್ಕೆ ಕುಸಿಯುವ ವ್ಯಕ್ತಿಯ ವ್ಯಥೆಯ ಕತೆ ಇಲ್ಲಿದೆ.

ವ್ಯಕ್ತಿಯ ಅಂತರಂಗದ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಯ ವಸ್ತುವನ್ನಾಗಿ ಆಯ್ದುಕೊಂಡ ದಿವಾಣಜಿ ಅವರು ಕನ್ನಡ ಕಾದಂಬರಿಗಳಿಗೆ ಹೊಸತಿರುವನ್ನು ತಂದು ಕೊಟ್ಟರು. ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ವಿಜೇತರಾದ (ನಾಲ್ಕನೆಯ ಆಯಾಮ, ನಿರಿಂದ್ರಿಯ) ದಿವಾಣಜಿ ಹೊರನಾಡಿನಲ್ಲಿದ್ದೂ ಅಪಾರ ಕನ್ನಡ ಓದುಗರನ್ನು ಗಳಿಸಿಕೊಂಡಿದ್ದಾರೆ. ಬಹುಕಾಲದಿಂದ ಅವರು ಸೊಲ್ಲಾಪುರದಲ್ಲಿ ನೆಲೆನಿಂತು ಈ ಕನ್ನಡದ ಕೈಂಕರ್ಯದಲ್ಲಿ ನಿರತರಾಗಿದ್ದಾರೆ. ಈಗ ಅವರಿಗೆ ಎಪ್ಪತ್ತರ ಹರೆಯ, ಸಾರಸ್ವತ ಪ್ರಪಂಚದ ಗುಂಪುಗಾರಿಕೆಯಿಂದ ದೂರವಾಗಿದ್ದು ಸದಭಿರುಚಿಯ ಸಾಹಿತ್ಯ ನಿರ್ಮಾಣದಲ್ಲಿ ನಿರತರಾಗಿರುವ ದಿವಾಣಜಿ ಅವರ ಬದುಕು ಬರಹ ಪಾರದರ್ಶಕವಾಗಿದೆ.

ದಿವಾಣಜಿ ಅವರು ಪ್ರತಿಭಾವಂತ ಸೃಜನಶೀಲಲೇಖಕರಾಗಿ ಮಾತ್ರ ಹೆಸರು ಮಾಡಿದವರಲ್ಲ. ಸೃಜನೇತರ ಸಾಹಿತ್ಯ ಕ್ಷೇತ್ರದಲ್ಲಿಯೂ ದುಡಿದಿದ್ದಾರೆ. ಪ್ರಸಾದಯೋಗ ಅವರ ಪಿ.ಎಚ್.ಡಿ. ಮಹಾಪ್ರಬಂಧ. ಪುರಂದರದಾಸರ ಜೀವನ ಮತ್ತು ಕೃತಿಗಳು ಎಂಬ ಅವರ ಮಹಾಪ್ರಬಂಧಕ್ಕೆ ಪುಣೆ ವಿ.ವಿ.ಯಿಂದ ಡಾಕ್ಟರೇಟ್ ಪದವಿ ದೊರಕಿದೆ. ಮರಾಠಿ

(ಪುಟ 15ಕ್ಕೆ)

# ಆಶಾಪೂರ್ಣ ದೇವಿ

ಲಕ್ಷ್ಮೀನಾರಾಯಣ ಆರೋರಾ

ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು 1977ರ ಸಾಲಿಗೆ ದೊರಕಿಸಿಕೊಂಡ ಹೆಸರಾಂತ ಬಂಗಾಳಿ ಕಾದಂಬರಿಕಾರ್ತಿ ಶ್ರೀಮತಿ ಆಶಾಪೂರ್ಣದೇವಿ ಬಂಗಾಳಿ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದಾರೆ. ಬಂಗಾಳಿ ಜನತೆಯ ಬದುಕಿನಲ್ಲಿ ಹೊಸದಾಗಿ ಅವಿಭವಿಸಿದ ಕೌಟುಂಬಿಕ ಜೀವನದ ಯಥಾವತ್ತಾದ ಚಿತ್ರವನ್ನು ನೀಡಿರುವ ಬರಹಗಾರರಲ್ಲಿ ಅವರು ಅಗ್ರಗಣ್ಯರೆನಿಸಿದ್ದಾರೆ. ಇವತ್ತಿನ ಭಾರತೀಯ ಸಾಂಸಾರಿಕ ಬದುಕಿನಲ್ಲಿ ಎದುರಾಗುವ ಹೊಸ ಅರಿವಿನ ಹಿನ್ನೆಲೆಯಲ್ಲಿ ಅವರು ಬಗೆಬಗೆಯ ವಿಕ್ಷುಬ್ಧತೆ, ಅಸ್ಥಿರತೆ, ಹೊಂದಾಣಿಕೆಯ ಅಭಾವ ಇವೇ ಮೊದಲಾದ ಅಂಶಗಳನ್ನು ಕುರಿತಂತೆ ಪರಿಣಾಮಕಾರಿಯಾಗಿ ಚಿತ್ರಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ.

ಆಶಾಪೂರ್ಣದೇವಿಯವರು ಜನವರಿ 8, 1909ರಂದು ಕಲ್ಕತ್ತೆಯಲ್ಲಿ ಜನಿಸಿದರು. ಬಂಗಾಳಿ ಅವರ ಮಾತೃಭಾಷೆ. ಬರವಣಿಗೆ ಕೃಷಿಯ ಹಾದಿಯಲ್ಲಿ ಅವರು ಸಾಗಿಬಂದ ದಾರಿ ಅಷ್ಟೇನೂ ಸುಗಮವಾಗಿರಲಿಲ್ಲ. ಶಿಕ್ಷಣ ದೊರಕಿಸಿಕೊಳ್ಳುವುದು ಆ ಕಾಲದಲ್ಲಿ ಮಹಿಳೆಯರ ಪಾಲಿಗೆ ತುಂಬ ಅಪರೂಪದ ಸಂಗತಿಯಾಗಿತ್ತು. ಎಲ್ಲೋ ಕೆಲವು ಮಂದಿ ಹೆಣ್ಣುಮಕ್ಕಳು ಮಾತ್ರ ಸ್ವಲ್ಪ ಹೆಚ್ಚಿನ ಶಿಕ್ಷಣ ಪಡೆದುಕೊಳ್ಳುವುದು ಮಾತ್ರ ಅಲಲ್ಲಿ ಕಂಡುಬರುತಿತ್ತು. ಆಶಾಪೂರ್ಣರದು ಸಂಪ್ರದಾಯಸ್ಥ ಮನೆತನ. ಹಾಗಾಗಿ ಆಧುನಿಕ ಶಿಕ್ಷಣ ಪಡೆದುಕೊಳ್ಳುವುದು ಅವರ ಪಾಲಿಗೆ ಕನಸೇ ಆಗಿತ್ತು. ಅವರು ಹುಟ್ಟಿಬೆಳೆದ ಮಧ್ಯಮವರ್ಗದ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಉತ್ಸಾಹ ತೋರಲಿಲ್ಲ. ಅದರಲ್ಲೂ ಸ್ವಲ್ಪಮಟ್ಟಿಗೆ ಓದಲು ಬರೆಯಲು ಅವರಿಗೆ ಉತ್ತೇಜನ ದೊರೆತದ್ದು ತಾಯಿಯಿಂದಲೇ.

ಓದುವುದೇ ಹೆಣ್ಣುಮಕ್ಕಳ ಪಾಲಿಗೆ ವೈಭೋಗವೆಂದು ಪರಿಗಣಿಸಿದ್ದ ಪರಿಸರದಲ್ಲಿ ಆಶಾಪೂರ್ಣರು ಬಹಳ ಕಷ್ಟಪಟ್ಟೇ ಅಕ್ಷರಾಭ್ಯಾಸ ಮಾಡಿದರು. ವರ್ಷಗಳು ಉರುಳಿದಂತೆ ಓದುವುದರಲ್ಲಿ ಆಸಕ್ತಿ ತಳೆದ ಅವರು ಪುಸ್ತಕವೆಂದರೆ ಅದನ್ನು ತೆಗೆದುಕೊಂಡು ಅಭ್ಯಾಸ ಮಾಡತೊಡಗಿದರು. ಸುತ್ತಮುತ್ತಲ ಆಗುಹೋಗುಗಳನ್ನೆಲ್ಲ ಅತೀವ ಜಿಜ್ಞಾಸೆಯಿಂದ ಕುತೂಹಲದಿಂದ ಗಮನಿಸ ತೊಡಗಿದರು.

ಆಶಾಪೂರ್ಣರಿಗೆ ಹದಿನೈದು ವರ್ಷ ವಯಸ್ಸಾಗಿದ್ದಾಗ ಕಾಳಿದಾಸ ಗುಪ್ತರ ಜೊತೆಯಲ್ಲಿ ಅವರ ಮದುವೆಯಾಯಿತು. ಅವರ ಪಾಲಿಗೆ ಅತ್ತೆಯಮನೆಯ ಬದುಕು ತವರು ಮನೆಯ ಬದುಕಿಗಿಂತ ಭಿನ್ನವಾಗಿರಲಿಲ್ಲ. ಅಪ್ಪನ ಮನೆಯಲ್ಲಿ ಹೆಣ್ಣು ಮಕ್ಕಳು ಪಂಜರದ ಪಕ್ಷಿಗಳಂತಿದ್ದರೆ ಗಂಡನ ಮನೆಯಲ್ಲಿ ಸಹ ಸಂಪ್ರದಾಯದ ಸಂಕೋಲೆ ಬಿಗಿಯಾಗಿತ್ತು. ಪಂಚಾಂಗವೊಂದನ್ನು ಬಿಟ್ಟರೆ ಮನೆಯಲ್ಲಿ ಪುಸ್ತಕಗಳೇನೂ ಇರಲಿಲ್ಲ !

ತಕ್ಕ ಮಟ್ಟಿಗೆ ಓದುಬರಹವನ್ನು ರೂಢಿಸಿಕೊಂಡ ಅನಂತರ ಆಶಾಪೂರ್ಣರು ತಮ್ಮ ಸಾಹಿತ್ಯ ಕೃಷಿಯನ್ನು ಮಕ್ಕಳ ಕಥೆಗಳೊಂದಿಗೆ ಪ್ರಾರಂಭಿಸಿದರು. ಸಮಯವನ್ನು ಉಪಯುಕ್ತವಾಗಿ ಕಳೆಯುವ ನಿಟ್ಟಿನಲ್ಲಿ ಈ ಬಗೆಯ ಸಾಹಿತ್ಯ ರಚನೆ ಅವರಿಗೆ ತುಂಬ ನೆರವಾಯಿತು. ಇಂದಿಗೂ ಅವರು ಬರೆದ ಮಕ್ಕಳಕಥೆಗಳು ಬಂಗಾಳಿ ಸಾಹಿತ್ಯದಲ್ಲಿ ಸಾಕಷ್ಟು ಜನಪ್ರಿಯವಾಗಿದೆ.

ಭಾರತೀಯ ಮಹಿಳೆಯನ್ನು ಕುರಿತಂತೆ ನಡೆಯುತ್ತಿದ್ದ ಶೋಷಣೆ ಮತ್ತು ದಬ್ಬಾಳಿಕೆಯನ್ನು ವಿಷಯವಾಗಿಟ್ಟುಕೊಂಡು ಆಶಾಪೂರ್ಣರು ಮೊದಲಿಗೆ ಅನೇಕ ಪದ್ಯಗಳನ್ನು ಬರೆದರು. ಶೋಷಣ ವ್ಯವಸ್ಥೆಯ ವಿರುದ್ಧ ಅವರ ಒಳದನಿ ಸಾಕಷ್ಟು ಸಮರ್ಥವಾಗಿತ್ತು. ಸಾಧಾರಣವಾಗಿ ಅನೇಕ ಬರಹಗಾರರು ಪ್ರಾರಂಭದಲ್ಲಿ ಮಾರುಹೋಗುವಂತೆ ಪ್ರೇಮಕತೆಗಳ ರಮ್ಯ ಪ್ರಪಂಚಕ್ಕೆ ಅವರು ಮಾರು ಹೋಗಲಿಲ್ಲ. ಮೊದಲಿನಿಂದಲೇ ಅವರ ಸಾಹಿತ್ಯದ ಗುರಿ ಬೇರೆಯಾಗಿತ್ತು. ಮೊನಚಾಗಿತ್ತು. ಪ್ರೇಮಕತೆಗಳನ್ನು ಬರೆಯಲು ಒತ್ತಾಸೆ ನೀಡುವ ಆ ಬಗೆಯ ರಮ್ಯವಾದ ಮತ್ತು ರಸಪೂರ್ಣವಾದ ಬದುಕಿನ ಅನುಭವವೇ ತಮಗೆ ಒದಗಿಬರಲಿಲ್ಲವೆಂದು ಅವರೇ ಒಂದೆಡೆ ಹೇಳಿದ್ದಾರೆ.

ತಮ್ಮ ಸಾಹಿತ್ಯ ಜೀವನದಲ್ಲಿ ಮಹಿಳೆಯರ ಹಕ್ಕು ಬಾಧ್ಯತೆಗಳನ್ನು ಹಿತಾಸಕ್ತಿಗಳನ್ನು ಎತ್ತಿಹಿಡಿದು ಒಂದು ರೀತಿಯಲ್ಲಿ 'ಬಂಡಾಯ' ಬರಹಗಾರ್ತಿ ಎನಿಸಿಕೊಂಡ ಅವರೇ ಹೇಳುವಂತೆ ''ಈ ರೀತಿಯ ಬರವಣಿಗೆಯಲ್ಲಿ ತೊಡಗಿದುದು ಕುಟುಂಬವ್ಯವಸ್ಥೆಯಲ್ಲಿ ಕಂಡುಬರುವ ದುರಂತ ಪ್ರಣಯ ಇಲ್ಲವೆ ಭಗ್ನಗೊಂಡ ವಿವಾಹ ಇಷ್ಟೇ ಕಾರಣದಿಂದಲ್ಲ, ನನ್ನ ಕುಟುಂಬದಲ್ಲಿ ಪುರುಷರು ಮಹಿಳೆಯರ ಬಗ್ಗೆ ತೋರಿಸುತ್ತಿದ್ದ ಅನಾದರಣೆ, ಹೆಣ್ಣೆಂದರೆ ಒಂದು ಬಗೆಯ ಅಸಮಾನತೆ ಇವೆಲ್ಲ ನನ್ನ ಹೃದಯವನ್ನು ಚುಚ್ಚುತ್ತಿದ್ದವು. ಹೆಂಗಸರಾಗಿ ಹುಟ್ಟಿದ ಮಾತ್ರಕ್ಕೆ ಇಷ್ಟೊಂದು ಕಷ್ಟಕೋಟಲೆಗಳಿಗೆ ಒಳಗಾಗಬೇಕೆ ಎಂದು ಆಶ್ಚರ್ಯಪಡುವಂತಾಗುತ್ತಿತ್ತು. ಗಂಡಸರಿಗೆ ಇರುವ ಸವಲತ್ತುಗಳು ಹಕ್ಕು ಬಾಧ್ಯತೆಗಳು ಹೆಂಗಸರಿಗೆ ಏಕೆ ಇರಬಾರದು? ಪಾಲಿಗೆ ಬಂದದ್ದು ಪಂಚಾಮೃತವೆಂದು ಭಾವಿಸಿ ಅವರು ಆ ಕಡುಕೌಟುಂಬಿಕ ವ್ಯವಸ್ಥೆಗೆ ತಮ್ಮನ್ನು ಒಪ್ಪಿಸಿಕೊಂಡುಬಿಡಲಿಲ್ಲ. ಆಗಾಗ್ಗೆ ಸಣ್ಣ ಕತೆಗಳನ್ನು ಬರೆಯುವುದರ ಮೂಲಕ ಅವರು ತಮ್ಮ ಪ್ರಗತಿಶೀಲ ಭಾವನೆಗಳಿಗೆ ಅಭಿವ್ಯಕ್ತಿ ನೀಡತೊಡಗಿದರು.

ಆದರೆ ಏನಾದರೂ ಒಂದು ಬೃಹದಾದ್ದನ್ನು ಬರೆಯುವ ಆಸೆ ಅವರಲ್ಲಿ ಆಗಾಗ್ಗೆ ಪುಟಿಯುತ್ತಿತ್ತು. ಪ್ರಕಾಶಕರೊಬ್ಬರು ಅವರಿಗೆ ಕಾದಂಬರಿಯೊಂದನ್ನು ಬರೆದು ಕೊಡಲು ಹೇಳಿದಾಗ ಬಹಳ ಕಾಲದ ಕನಸು ಅವರ ಪಾಲಿಗೆ ನನಸಾಗುವ ಸುಯೋಗ ಒದಗಿದಂತಾಯಿತು. 1943ರಲ್ಲಿ ಆಶಾಪೂರ್ಣರ ಮೊದಲ ಕಾದಂಬರಿ 'ಪ್ರೇಮ್ ಓ ಪ್ರೊಯೋಜನ್' ಬೆಳಕು ಕಂಡಿತು. ಅವರ ಮೊದಲ ಕಾದಂಬರಿಗಳಲ್ಲಿ ಕೌಟುಂಬಿಕ ಬದುಕಿನ ಅಸಮಂಜಸತೆ ಹಾಗೂ ಬಡತನಗಳ ಚಿತ್ರಣ ಕಂಡುಬರುತ್ತದೆ. ಮಿತ್ರಿರಬಾಡೀ, ಬಲಯಗ್ರಾಸ, ಅಗ್ನಿಪರೀಕ್ಷಾ, ಕಲ್ಯಾಣಿ, ನಿರ್ಜನ ಪೃಥಿವೀ, ಶಶೀಬಾಬೂರ್ ಸಂಸಾರ್, ಅತಿಕ್ರಾಂತ, ಜನಜನಮ ಕೀ ಸಾಥಿ, ನೇಪಥ್ಯನಾಯಿಕಾ, ಅಂ. ಕ. ಛಾಡಪತ್ರ, ಸಮುದ್ರನೀಲ, ಅಕಾಶ್‌ನೀಲ, ಯೋಗನಿಯೋಗ್, ನಲಜನ್, ಮುಂತಾದ ಕಾದಂಬರಿಗಳ ವಸ್ತುಗಳಲ್ಲಿ ಮೇಲ್ನೋಟಕ್ಕೆ ಅಲ್ಲಲ್ಲಿ ವ್ಯತ್ಯಾಸಗಳು ಕಂಡುಬಂದರೂ ಒಟ್ಟಿನಲ್ಲಿ ಕೌಟುಂಬಿಕ ಬದುಕಿನ ಸಮಸ್ಯೆಗಳ ವಿಶ್ಲೇಷಣೆ ಅವುಗಳ ಹೂರಣವಾಗಿದೆ. ಆದರೂ ಅಲ್ಲಲ್ಲಿ ಇಂಥ ಸಮಸ್ಯೆಗಳ ನಡುವೆಯೂ ಹೊರಜಗತ್ತಿನ ಆಕರ್ಷಣೆ, ರೋಮಾನ್ಸ್ ಇತ್ಯಾದಿಗಳಿಗೆ ಅವರ ಕೃತಿಗಳಲ್ಲಿ ಪೂರಕವಾಗಿ ಸ್ಥಾನದೊರೆತಿದೆ.

'ಮುಖರ ರಾತ್ರಿ' ಎಂಬ ಕೃತಿ ಆಶಾಪೂರ್ಣದೇವಿಯವರ ಕಾದಂಬರಿಗಳ ಪೈಕಿ ರಚನಾತಂತ್ರದ ದೃಷ್ಟಿಯಿಂದ ಮಹತ್ವಪೂರ್ಣವಾದುದು. ಕಾದಂಬರಿ ರಚನೆಯ ತಂತ್ರಕ್ಕೆ ಸಂಬಂಧಪಟ್ಟಂತೆ ಇಲ್ಲಿ ಸ್ಪಷ್ಟವಾಗದ ಬದಲಾವಣೆಗೆ ನಿದರ್ಶನ ದೊರೆಯುತ್ತದೆ. ಈ ಕಾದಂಬರಿಯಲ್ಲಿ ಲೇಖಕಿ ಸವಕಲು ಬದುಕನ್ನು ಸಾಗಿಸುತ್ತಿರುವ, ಬದಲಾವಣೆ ಕಾಣದ ಮೇಲುವರ್ಗದ ಕುಟುಂಬವೊಂದರ ಬದುಕಿನ ಏಳುಬೀಳುಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಕುಟುಂಬ ಬೇರೆಬೇರೆ ವ್ಯಕ್ತಿಗಳು ಸ್ವಗತವಾಗಿ ಅಭಿವ್ಯಕ್ತಿಸಿಕೊಳ್ಳುತ್ತಿರುವಂತೆಯೇ ಕತೆಯ ಜಾಡು ಮುಂದೆ ಸಾಗುತ್ತದೆ. ಒಂದು ವಿಶಿಷ್ಟವಾದ ನಾಟಕೀಯತೆ ಈ ಕಾದಂಬರಿಗೆ ದಕ್ಕಿದೆ. ಪ್ರತಿಯೊಂದು ಪಾತ್ರವೂ ತನ್ನಲ್ಲೇ ಸ್ವತಂತ್ರ ಅಸ್ತಿತ್ವವನ್ನು ಪಡೆದದ್ದು ನಿರ್ಭಿಡವಾಗಿದೆ. 'ಉತ್ತರಾಯಣ' ' ಪ್ರೇಮ ಯುಗೇ ಯುಗೇ' ಕೃತಿಯಲ್ಲಿ ಲೇಖಕರು ರಚನಾ ಕೌಶಲ ಹಾಗೂ

ಮಾನಸಿಕ ನೆಲೆ ಮತ್ತು ಹಿನ್ನೆಲೆಗಳನ್ನು ಆಧರಿಸಿ ಘಟನೆಗಳಿಗೆ ವಾಸ್ತವತೆಯ ಮೆರುಗನ್ನು ನೀಡುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ. ಸಮಕಾಲೀನ ಕೌಟುಂಬಿಕ ಬದುಕಿನ ಒಳ ಹೊರಗುಗಳನ್ನು ವಿಪರ್ಯಾಯಗಳನ್ನು ಅವರಷ್ಟು ಸಹಜಸುಂದರವಾಗಿ ಅಂಕಿತಗೊಳಿಸುವ ಲೇಖಕರು ಪ್ರಾಯಃ ಬೆರಳೆಣಿಕೆಯಷ್ಟಿರಬಹುದು.

ಕಾದಂಬರಿಗಳ ಸಂಖ್ಯೆ ಹಾಗೂ ಬದುಕನ್ನು ಕುರಿತಂತೆ ಚಿಂತನ ನಡೆಸುವಲ್ಲಿ ವ್ಯಕ್ತಪಡಿಸುವ ವೈಶಿಷ್ಟ್ಯ, ಇವರೆಡು ದೃಷ್ಟಿಯಿಂದಲೂ ಆಶಾಪೂರ್ಣರು ಇಂದಿನ ಬಂಗಾಳಿ ಕಾದಂಬರಿ ಪ್ರಪಂಚದಲ್ಲಿ ಅಗ್ರಗಣ್ಯರು. ಬಹಳಷ್ಟು ಭಾರತೀಯ ಸಾಹಿತ್ಯಗಳಲ್ಲಿ ಕಂಡುಬರುವಂತೆ ಮಹಿಳೆಯರು ಲೇಖಕ ಹಿಡಿಯುವುದು ಆಶಾಪೂರ್ಣರು. ಬರವಣಿಗೆ ಪ್ರಾರಂಭಿಸಿದ ಕಾಲದಲ್ಲಿ ಅಪರೂಪವೇ ಆಗಿತ್ತು. ಆದರೂ ಲೇಖಕರು ಈ ದೃಷ್ಟಿಯಲ್ಲೂ ಪ್ರಾಯಃ ಒಂದು ಹೆಜ್ಜೆ ಮುಂದೆಯೇ ಇದ್ದಾರೇನೊ. ಗಂಡು - ಹೆಣ್ಣುಗಳ ನಡುವೆ ಕಂಡುಬರುವ ಪರಸ್ಪರ ಆಕರ್ಷಣೆ, ನಿಗೂಢತೆ, ವಿಚಿತ್ರ ಪ್ರಭಾವಗಳು ಇವೆಲ್ಲ ಕೂಡ ಅವರ ಕಾದಂಬರಿಗಳಲ್ಲಿ ಎದ್ದು ಕಾಣುವುದಾದರೂ ಸ್ತ್ರೀಪಾತ್ರಗಳ ಚಿತ್ರಣಕ್ಕೆ ಅವರು ಹೆಚ್ಚು ಮಹತ್ವಕೊಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಏಕೆಂದರೆ ಪುರುಷ ಲೇಖಕರ ಕಾದಂಬರಿಗಳಲ್ಲಿ ಪುರುಷರ ಪಾತ್ರಗಳ ವಿಶೇಷಣೆಗೆ ಹೆಚ್ಚು ಮಹತ್ವ ದೊರೆತು ಸ್ತ್ರೀ ಗೌಣವಾಗಿ ಉಳಿದುಬಿಟ್ಟಿರುತ್ತಾಳೆ.

ಸಾಮಾಜಿಕ ರೀತಿ ನೀತಿಗಲ ಕಾರಣವಾಗಿ ಹಾಗೂ ಕೆಲವಾರು ಬಗೆಯ ಮನೋ ವೈಜ್ಞಾನಿಕ ಕಾರಣಗಳಿಂದಾಗಿ ಕೇವಲ ಬಂಗಾಳಿ ಸಾಹಿತ್ಯ ಹಾಗೂ ಭಾರತೀಯ ಸಾಹಿತ್ಯವೇ ಏಕೆ ಐರೋಪ್ಯ ಸಾಹಿತ್ಯದಲ್ಲೂ ಕೂಡ ಹೆಣ್ಣಿನ ದನಿ ಸಾಕಷ್ಟು ಈಚಿನ ವರೆಗೂ ನಿಶ್ಶಬ್ದವಾಗಿತ್ತು. ಮೂಕವಾಗಿತ್ತು. ಪುರುಷ ಪ್ರಧಾನತೆಯೇ ಎಲ್ಲೆಲ್ಲೂ ಕಂಡುಬರುತ್ತಿತ್ತು. ಗಂಡಿನ ಇಚ್ಛೆಗೆ ಅನುಗುಣವಾಗಿ ನಡೆದುಕೊಳ್ಳುವುದು ಇಲ್ಲವೆ ಮೂಕ ಪ್ರತಿಭಟನೆ ವ್ಯಕ್ತಪಡಿಸುವುದು ಇವಿಷ್ಟೇ ಹೆಣ್ಣಿನ ಪಾಲಿಗೆ ಉಳಿದಿತ್ತು. ಜೇನ್ ಆಸ್ಟಿನ್, ಎಮಿಲಿ ಬ್ರಾಂಟಿ, ಶರ್ಲಾಟ್ ಬ್ರಾಂಟಿ ಮುಂತಾದ ಕಾದಂಬರಿಕಾರರು ಹೆಣ್ಣಿನ ದನಿಯನ್ನು ಯುರೋಪಿನಲ್ಲಿ ತಮ್ಮ ಕಾದಂಬರಿಗಳ ಮೂಲಕ ಮೊಳಗಿಸಿದರು. ಇಡೀ ಪ್ರಪಂಚದ ರಹಸ್ಯ ಹೆಣ್ಣಿನ ಕಣ್ಣುಗಳ ಮೂಲಕ ಹೇಗೆ ಪ್ರತಿಬಿಂಬಿತ ಗೊಳ್ಳುತ್ತಿದೆ, ಹೆಣ್ತನದ ಬಣ್ಣದ ಕನ್ನಡಿಯಲ್ಲಿ ಘಟನೆಗಳು ಹೇಗೆ ಮಾರ್ದನಿ ಪಡೆಯುತ್ತವೆ, ಹೆಣ್ಣಿನ ಹೃದಯದ ಆಳವನ್ನು ಹೊಕ್ಕ ಇನ್ನೊಬ್ಬ ಹೆಣ್ಣು ಅದನ್ನು ಹೇಗೆ ಚಿತ್ರಿಸಬಲ್ಲದು ಇವೆಲ್ಲ ನಿಜಕ್ಕೂ ಕುತೂಹಲಕಾರಿಯಾದ ವಿಷಯಗಳು. ಹೆಣ್ಣಿನ ಬಗೆಗೆ ಕೇವಲ ಅತಿಶಯವಾದ ಕೋಮಲ ಭಾವನೆಯನ್ನು ಹೊಂದಿರುವ ಕಲ್ಪನಾಶೀಲ ಪುರುಷ ಲೇಖಕರು ಭಾವುಕತೆಗೆ ಒಳಗಾಗಿ ಹೆಣ್ಣಿನ ದೈಹಿಕ ಸೌಂದರ್ಯಕ್ಕೆ ಮತ್ತು ಹೆಣ್ತನದ ಮೃದುತ್ವಕ್ಕೆ ಮಾರುಹೋಗಿ ಆದರ್ಶನಾರಿಯ ರೂಪದಲ್ಲಿ, ತ್ಯಾಗಜೀವಿಯ ರೂಪವಲ್ಲಿ ಆಕೆಯ ಮಹಿಮೆಯನ್ನು ಕೊಂಡಾಡಿ ಗಗನಕ್ಕೇರಿಸುವ ಗೀಳಿಗೆ ಗಂಟುಬಿದ್ದಿದ್ದರು. ಆದರೆ ಆಶಾಪೂರ್ಣರಂಥ ಲೇಖಕಿಯರ ಬರವಣಿಗೆಯಲ್ಲಿ ಮೈದುಂಬಿಸಿಕೊಂಡು ಬಂದ ಹೆಚ್ಚು ಪಾತ್ರಗಳು ತಮ್ಮ ತೀಕ್ಷ್ಣ ವಿವೇಚನಾಶಕ್ತಿ, ಬಿರುಸಾದ ಸತ್ಯಪ್ರಿಯತೆ ಈ ಕಾಲ್ಪನಿಕ ಆದರ್ಶಗಳನ್ನು ಕೆಲಮಟ್ಟಿಗೆ ಯಶಸ್ವಿಯಾಗಿ ಮಸುಕುಗೊಳಿಸಿದವು. ಹೆಣ್ಣು ಕೂಡ ಎಲ್ಲರಂತೆ ವ್ಯಕ್ತಿತ್ವವುಳ್ಳವಳು, ಎಲ್ಲರಂತೆ ಬದುಕಲು ಹಾತೊರೆಯುವವಳು ಎಂಬ ಸಂದೇಶವನ್ನು ಸಾರುವ ಅವರ ಕಾದಂಬರಿಯ ಪಾತ್ರಗಳು ನಾಯಕಿಯವರಿಗೆ ಮಣ್ಣಿನ ಸ್ಪರ್ಶ ಮೂಡಿಸುವಲ್ಲಿ ಸಫಲವಾದವು. ಆಳವಾಗಿ ಸ್ವಂತ ವ್ಯಕ್ತಿತ್ವವನ್ನು ವಿಶ್ಲೇಷಿಸಿಕೊಂಡು, ತನ್ನತನದ ಅರಿವನ್ನು ಸ್ವಂತಿಕೆಯನ್ನೂ ಮೂಡಿಸಿಕೊಂಡು ಬಂಡಾಯದ ತೆಳುಲೇಪವನ್ನೂ ಕೂಡ ಅವರ ಅನೇಕ ಪಾತ್ರಗಳ ಪಡೆದುಕೊಳ್ಳುತ್ತವೆ.

ಆಶಾಪೂರ್ಣ ದೇವಿಯವರ ಸಾಹಿತ್ಯ ಸೃಷ್ಟಿ ಗಾತ್ರದಲ್ಲಿ ಹಿರಿದಾದುದು. ಗುಣದಲ್ಲಿ ಉತ್ತಮವಾದುದು. ಸುಮಾರು ಇನ್ನೂರೈವತ್ತಕ್ಕೂ ಮಿಗಿಲಾಗಿರುವ ಅವರ ಕತೆಕಾದಂಬರಿಗಳಲ್ಲಿ (ನೂರಕ್ಕೂ ಹೆಚ್ಚು ಕಾದಂಬರಿಗಳು) 'ಪ್ರಥಮ ಪ್ರತಿಶ್ರುತಿ', 'ಸುವರ್ಣಲತಾ' ಹಾಗೂ 'ಬಕುಲಕಥಾ' ಎಂಬ ಕಾದಂಬರಿ ತ್ರಿವಳಿಗಳು ಅಸಮಾನ್ಯವಾಗಿವೆ. ಒಂದರ ಜೊತೆಗೊಂದು ಹಣೆದುಕೊಂಡಂತಿರುವ ಈ ಕಾದಂಬರಿಗಳು ಅವರ ಜೀವನಾನುಭವದ, ಪ್ರತಿಭಾಶ್ರೀಮಂತಿಕೆಯ ಅಪೂರ್ವ ಸೃಷ್ಟಿ. 1977ರ ಜ್ಞಾನಪೀಠ ಪ್ರಶಸ್ತಿ ಲಭ್ಯವಾದುದು 'ಪ್ರಥಮ ಪ್ರತಿಶ್ರುತಿ' ಕಾದಂಬರಿಗೇ. ದೂರದರ್ಶನದಲ್ಲಿ ಸಹ ಧಾರಾವಾಹಿಯಾಗಿ ಈ ಬೃಹತ್ ಕಾದಂಬರಿ ತೆರೆಕಂಡಿದೆ. ಜ್ಞಾನಪೀಠ ಪ್ರಶಸ್ತಿಗಿಂತಲೂ ಮೊದಲಿಗೆ ಅವರು ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಗಳಿಸಿಕೊಂಡಿದ್ದಾರೆ. ಕಲ್ಕತ್ತಾ ವಿಶ್ವವಿದ್ಯಾನಿಲಯದ ಲೀಲಾ ಪಾರಿತೋಷಕ ಹಾಗೂ ಚಿನ್ನದ ಪದಕ, ಪಶ್ಚಿಮ ಬಂಗಾಳದ ಸರ್ಕಾರದಿಂದ ರವೀಂದ್ರ ಪ್ರಶಸ್ತಿ ಹಾಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಈ ಪೈಕಿ ಕೆಲವು ಗಮನಾರ್ಹವಾದವುಗಳು.

''ನೀವು ಬರವಣಿಗೆ ಆರಂಭಿಸಿದ್ದು ಹೇಗೆ'' ಪತ್ರಕರ್ತರೊಬ್ಬರು ಪ್ರಶ್ನಿಸಿದಾಗ ಆಶಾಪೂರ್ಣರು ಹೀಗೆಂದರಂತೆ.... ''ಮಗು ತಾಯಿಯನ್ನು ತಾನೆಲ್ಲಿ ಸಿಕ್ಕಿದೆ ಅಂತ ಕೇಳಿದರೆ ಆಕೆ ಏನು ಹೇಳಿಯಾಳು? ''ನೀನು ನನ್ನಲ್ಲಿ ಆಸೆಯ ಅಂಕುರವಾಗಿ ಕುಳಿತಿದ್ದೆ ಎನ್ನಬಲ್ಲಳೇನೋ''. ಅಂತೆಯೇ ಈ ಆಸೆಯ 'ಅಂಕುರ' ಪ್ರತಿಕೂಲ ಪರಿಸ್ಥಿತಿಗಳಲ್ಲೂ ಅವರಲ್ಲಿ ಮೊಗ್ಗಾಗಿ ಹೂವಾಗಿ ಅರಳಿ ತನ್ನ ಕಂಪನ್ನು ಎಲ್ಲೆಡೆ ಬೀರಿತು.

ತಮ್ಮ ಕಾದಂಬರಿಯ ಪಾತ್ರಗಳಂತೆಯೇ ಆಶಾಪೂರ್ಣದೇವಿಯವರು ಮಧ್ಯಮ ವರ್ಗದ ಗೃಹಿಣಿಯಾಗಿಯೇ ಮನೆ ಕೆಲಸಗಳತ್ತ ಗಮನ ಹರಿಸಿ ಬದುಕನ್ನು ಸಾಗಿಸಿದರು. ಅವರ ಪತಿ ಕಾಳಿದಾಸರು ಪತ್ನಿಯ ಸಾಹಿತ್ಯಿಕ ಬೆಳವಣಿಗೆಯಲ್ಲಿ ಆಸಕ್ತರಾಗಿದ್ದರು. ವ್ಯಕ್ತಿಗಿಂತ ಮಿಗಿಲಾಗಿ ಹೆಣ್ಣಿನ ಶೋಷಣೆಗೆ ಕಾರಣವಾದ ಕೌಟುಂಬಿಕ ಹಾಗೂ ಸಾಮಾಜಿಕ ವ್ಯವಸ್ಥೆಯ ವಿಚಾರವಾಗಿ ತಮ್ಮ ಲೇಖನಿಯ ಮೂಲಕ ಆಕ್ರೋಶ ವ್ಯಕ್ತಪಡಿಸುವ ಆಶಾಪೂರ್ಣರು ಮಹಿಳೆಯರು ಹೆಚ್ಚು ಹೆಚ್ಚಾಗಿ ಬರೆಯಲು ಮುಂದಾಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಾಗಿಯೇ ಹೆಣ್ಣುಮಕ್ಕಳು ವೈಚಾರಿಕವಾಗಿ ಚಿಂತನಶೀಲರಾಗಬೇಕೆಂಬ ಅಭೀಪ್ಸೆ ಅವರದು. ಏಕೆಂದರೆ ಇಷ್ಟೆಲ್ಲ ಬದಲಾವಣೆಗಳು, ಜಾಗೃತಿ ಎಲ್ಲ ಆದ ಮೇಲೂ ಗಂಡು ಹೆಣ್ಣಿಗೆ ಕೇವಲ 'ಬಲವಂತವಾದ ಮನ್ನಣೆ'ಯನ್ನು ಮಾತ್ರ ಕೊಡುತ್ತಿದ್ದಾನೆ ಎಂಬುದು ಅವರ ಅನಿಸಿಕೆ.

ಒಟ್ಟಿನಲ್ಲಿ ಆಶಾಪೂರ್ಣದೇವಿಯವರು ಈ ಕಾಲದ ಅತ್ಯಂತ ಚಿಂತನಶೀಲ ಕಾದಂಬರಿಕಾರ್ತಿಯರಲ್ಲಿ ಒಬ್ಬರೆನ್ನಬಹುದು. ಅವರ ಕಾದಂಬರಿಗಳಲ್ಲಿ ವ್ಯಕ್ತವಾಗುವ ಐತಿಹಾಸಿಕ ಪ್ರಜ್ಞೆ ಅನ್ಯಾದೃಶವಾದುದು. ಅವರು ಪ್ರಾಚೀನ ಚರಿತ್ರೆಯ ಆಳಕ್ಕಿಳಿದು ಚರಿತ್ರೆಯನ್ನೇನೂ ಬರೆಯಲಿಲ್ಲ. ಸಾಧಾರಣ ಬದುಕಿನ ಘಟನಾವಳಿಯಲ್ಲೇ ಅವರು ಇತಿಹಾಸದ ತುಣುಕುಗಳನ್ನು ಕಂಡುಕೊಂಡಿದ್ದಾರೆ. ಸಮಕಾಲೀನ ಆಗುಹೋಗುಗಳ ನಡುವೆಯ ಅಡಗಿರುವ ಚರಿತ್ರೆಯ ಹೆಜ್ಜೆ ಗುರುತುಗಳನ್ನು ಅವರು ಪತ್ತೆಹಚ್ಚಿದ್ದಾರೆ. ಸೂಕ್ತವಾಗಿ ಆ ಪ್ರಜ್ಞೆಯನ್ನು ತಮ್ಮ ಕೃತಿಗಳಲ್ಲಿ ಮೇಳವಿಸಿಕೊಂಡಿದ್ದಾರೆ. ಹೆಣ್ಣಿನ ಸಾಮಾಜಿಕ ಹಾಗೂ ಕೌಟುಂಬಿಕ ಶೋಷಣೆ, ಬಂಡಾಯ, ಪೂರ್ಣ ವ್ಯಕ್ತಿತ್ವ, ನಿರ್ಭಯ, ಸ್ವತಂತ್ರಚಿಂತನೆ, ವಿವೇಚನೆ, ಇವೇ ಮುಂತಾದ ಅಂಶಗಳ ಅಧ್ಯಯನ ನಡೆಸುವ ಯಾರೇ ಆದರೂ ಆಶಾಪೂರ್ಣದೇವಿಯವರನ್ನು ಹಾಗೂ ಅವರ ಕಾದಂಬರಿಗಳನ್ನು ಸ್ಮರಿಸದೆ ಮುಂದೆ ಹೋಗುವಹಾಗಿಲ್ಲ.

# ಜೋಗ್ಯೋರ ಅಂಜಪ್ಪನ ಕೋಳೀಕತೆ

✍ ಮಾಸ್ತಿ ವೆಂಕಟೇಶ ಅಯ್ಯಂಗಾರ

ಕನ್ನಡ ಸಣ್ಣ ಕಥಾ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಮಾಸ್ತಿ ಅವರು ಕನ್ನಡದ ಪ್ರತಿಭಾನ್ವಿತ ಕತೆಗಾರರಲ್ಲಿ ಒಬ್ಬರು. 'ಜೋಗ್ಯೋರ ಅಂಜಪ್ಪನ ಕೋಳಿಕತೆ' ಅವರ ಉತ್ತಮ ಕತೆಗಳಲ್ಲಿ ಒಂದು. ಮಾಸ್ತಿ ಅವರ ಕತೆಗಳ ಆಳ ಅಗಲವನ್ನು ತಿಳಿದುಕೊಳ್ಳಲು ಈ ಕಥೆಯನ್ನು 'ನೇಸರು' ಓದುಗರಿಗಾಗಿ ಆಯ್ದು ಪ್ರಕಟಿಸಲಾಗಿದೆ.

೧

ನಮ್ಮ ಊರಿನ ಹಳೆ ಮುದುಕರಲ್ಲಿ ಬಹಳ ಹಳಬ ಜೋಗ್ಯೋರ ಅಂಜಪ್ಪ, ತಾನು ಹೈದನಾಗಿದ್ದಾಗ ಅದು ಇದು ಆಯಿತು. ಎಂದು ಹೇಳುತ್ತಾನೆ. ಇಂಥ ಸಮಾಚಾರವನ್ನು ನೋಡಿದವರು ಇನ್ನು ಯಾರೂ ಈಗ ಜೀವಂತರಾಗಿಲ್ಲ. ಶಿಪಾಯಿ ದಂಗೆ ಆದ ಕಾಲಕ್ಕೆ ಅಂಜಪ್ಪ ಹುಡುಗನಂತೆ, ಈಗವನ ವಯಸ್ಸು ಕೇಳಿದರೆ ಅವನು ನೂರುವರುಷ ಇರಬೇಕು ಎನ್ನುತ್ತಾನೆ. ಈಗ ಹತ್ತು ವರುಷದಿಂದ ಅವನಿಗೆ ನೂರುವರುಷ ವಯಸ್ಸು. ಮುಖ್ಯವಾಗಿ ಈ ಕಾರಣದಿಂದ ಅಂಜಪ್ಪ ಎಲ್ಲಾ ಸಂದರ್ಭದಲ್ಲಿಯೂ ಎಂಥವರಿಗಾದರೂ ಬುದ್ಧಿ ಹೇಳುವ ಅಧಿಕಾರವನ್ನು ಪಡೆದಿದ್ದಾನೆ. ಈ ವಿಚಾರದಲ್ಲಿ ಇತರರಿಗೆ ಏನಾದರೂ ಸಂದೇಹವಿದ್ದರೂ ಅಂಜಪ್ಪನಿಗೆ ಲೇಶವಾದರೂ ಇಲ್ಲ. ಹೀಗೆ ಮಾಡು, ಹಾಗೆ ಮಾಡು, ಎಂದು ಅಂಜಪ್ಪ ಹೇಳಿದಾಗ ಯಾರಾದರೂ ಒಡನೆಯೇ ಒಪ್ಪದೇ ಇದ್ದರೆ ಅವನು ''ಏನಯ್ಯ ಇದು? ನಿಮ್ಮಪ್ಪ ಮಗುವಾಗಿದ್ದಾಗ್ಲೆ ನನ್ನ ಗಡ್ಡ ನರೆತಿತ್ತು. ನನ್ಮಾತು ನಿನಗೆ ಹಗುರಾಯಿತೆ'' ಎಂದು ಕೇಳುವನು. ಪ್ರಾಯಶಃ ವಿಸ್ತಾರವಾದ ಅವನ ಅನುಭವದ ಫಲವಾಗಿ ಅವನು ಕೊಡುವ ಬುದ್ಧಿವಾದ ಒಳ್ಳೆಯವಾದ ಒಳ್ಳೆಯದಾಗಿಯೇ ಇರುತ್ತದೆ. ವಯಸ್ಸಿನಲ್ಲಿ ಜಾಂಬವಂತನಾಗಿದ್ದ ಹಾಗೆ ಅಂಜಪ್ಪ ಬುದ್ಧಿಯಲ್ಲಿ ಹನುಮಂತ.

ಮೂರು ದಿವಸದ ಹಿಂದೆ ಅಂಜಪ್ಪ ರಂಗಪ್ಪನ ಮನೆಗೆ ಬಂದಿದ್ದ. ರಂಗಪ್ಪನಿಗೆ ನಮ್ಮ ತಾಲ್ಲೂಕಿನಲ್ಲಿ ಬೆಂಚು ಮ್ಯಾಜಿಸ್ಟ್ರೇಟು ಕೆಲಸಕ್ಕೆ ನಿಯಮಿಸಿ ಈಗ ಕೆಲವು ದಿನಗಳ ಹಿಂದೆ ಆರ್ಡರು ಬಂದಿತು. ನಮ್ಮ ಊರಿನ ಜನಕ್ಕೆಲ್ಲಾ ಇದು ಬಹಳ ಸಂತೋಷ. ನಮ್ಮ ಶಾನುಭೋಗರು ಸಜಾಕೊಡುವ ಅಧಿಕಾರಾನ ಪಡೆದಿದ್ದಾರೆ ಎಂತ. ಹಳ್ಳಿಯ ಜನರಿಗೆ ಈ ಸಜಾಕೊಡುವುದು ಎನ್ನುವುದು ಬಹು ದರ್ಪದ ಶಕ್ತಿ ಎಂದು ಭಾವನೆ. ಏನಿಲ್ಲ ಎಂದರೂ ಈ ಅಧಿಕಾರ ಬಂದವನು ಒಬ್ಬ ಸುಬೇದಾರರಿಗೆ ಸಮನಾದ ಹಾಗೆ ಲೆಕ್ಕ. ಪೂರ್ವದಲ್ಲಿ ಸುಬೇದಾರ್ರಿಗೆ ಮತ್ತು ಅವರಿಗೆ ಮೇಲ್ಪಟ್ಟವರಿಗೆ ಮಾತ್ರ ಈ ಅಧಿಕಾರವಿರುತ್ತಿತ್ತು. ಈಗ ಸರ್ಕಾರದವರು ಅದನ್ನು ಸುಬೇದಾರರಿಂದಲೂ ಕಿತ್ತುಕೊಂಡಿದ್ದಾರೆ ಎಂದು ಜನರ ಎಣಿಕೆ. ಆದ್ದರಿಂದ ಹಾಗೇನೇ ನೋಡಿದರೆ ಈ ಅಧಿಕಾರ ಬಂದ ಮನುಷ್ಯ ಸುಭೇದಾರರಿಗಿಂತ ಒಂದು ಗುಲುಗಂಜಿಯಷ್ಟು ಮೇಲಿನ ಹುದ್ದೆ ಪಡೆದ ಹಾಗೆಯೇ. ಗ್ರಾಮದ ಮುಖ್ಯ ವೃದ್ಧನಾದ ಅಂಜಪ್ಪ ತನ್ನೂರ ಶಾನುಭೋಗರಿಗೆ ಬಂದ ಈ ಮರ್ಯಾದೆಯ ಸಮಾಚಾರವನ್ನು ಕೇಳಿ ಅವರನ್ನು ಮಾತನಾಡಿಸುವುದಕ್ಕೆ ಮತ್ತು ಸ್ವಲ್ಪ ಬುದ್ಧಿ ಹೇಳುವುದಕ್ಕೆ ಎಂದು ಬಂದ.

ಅಂಜಪ್ಪ ಬಂದದ್ದನ್ನೂ ನೋಡಿ ರಂಗಪ್ಪ ''ಬಾ, ಬಂತಂತಲ್ಲ. ಬಾಳಾ ಸಂತೋಸ.

ರಂಗಪ್ಪ : ಸಂತೋಸ ಏನೋ ಸರಿ ಅಂಜಪ್ಪ. ಆದರೇನು? ಬಿಟ್ಟಿದುಡಿಯೋದು. ದುಡ್ಡಿಲ್ಲ, ಕಾಸಿಲ್ಲ.

ಅಂಜಪ್ಪ : ದುಡ್ಡಿಲ್ಲ? ಯಾಕೆ ದುಡ್ಡಿಲ್ಲ?

ರಂಗಪ್ಪ : ಇದು ಬೆಂಚು ಮೇಸ್ಟ್ರೀಟು ಎಂದ ಮರ್ಯಾದೆಗೆ ಕೆಲ್ಸಾ ಮಾಡೋದು. ಇದಕ್ಕೆ ಸರ್ಕಾರದವರು ಸಂಬಳ ಕೊಡೋದಿಲ್ಲ.

ಅಂಜಪ್ಪ : ಸಂಬ್ಳಾ ಇಲ್ಲದೀರ ಇದ್ದರೂ ದುಡ್ಡು ಯಾಕಿಲ್ಲ ? ಸಂಬ್ಳಾ ತಕ್ಕೊಳ್ಳೋರು ಸಂಬ್ಳಾನ ಮೇಲ್ಕರ್ಚಿನ ದುಡ್ಡು ಅಂತ ಮಾಡ್ತಿರಲಿಲ್ಲವಾ? ಸಂಬ್ಳಾ ಒಂದಾದರೆ ಸಂಪಾದನೆ ಹತ್ತು.

ರಂಗಪ್ಪ : ಅದೆಲ್ಲಾ ಪೂರ್ವಕಾಲದ ಮಾತು. ಈಗ ಲಂಚಾ ಗಿಂಚಾ ನಡೆಯೋದಿಲ್ಲ.

ಅಂಜಪ್ಪ : ನಡೆಯೋರಿಗೆ ನಡೀತದೆ. ಇಲ್ಲದೇ ಇದ್ದೋರಿಗೆ ಇಲ್ಲಾ ತಾನೆ. ಹೋಗ್ಲಿ. ಈಗ ನೀನು ಕೋಪ ಬಂದ್ರೆ ಸುಬೇದಾರ್ರ್ನ ನಿಲ್ಸಿ ಜುಲ್ಮಾನೆ ಹಾಕಬಹುದೋ ಇಲ್ಲೋ?

ರಂಗಪ್ಪ : ನೀನು ಮೇಸ್ಟ್ರೀಟಾಗಿದ್ದರೆ ಹಾಗೆ ಮಾಡಬಹುದಾಗಿತ್ತು. ನಾನು ಶಾನುಭೋಗ, ಸುಬೇದಾರ್ರಿಗೆ ಜುಲ್ಮಾನೆ ಹಾಕಿದರೆ ಖಾತೆ ಬರಲಿಲ್ಲ. ಅಂತ ಅವರು ನನ್ನ ಕೆಲಸದಿಂದ ತೆಗೀತಾರೆ.

ಅಂಜಪ್ಪನಿಗೆ ಇದು ನ್ಯಾಯ ಎಂದು ತೋರಿತು. ಓ ಹೌದು ಎನ್ನುತ್ತಾ ಅವನು ಸಂಚಿಯನ್ನು ತೆಗೆದು ಅಡಿಕೆ ಎಲೆಯನ್ನು ಆರಿಸುವುದರಲ್ಲಿ ತೊಡಗಿದನು. ಅಂಜಪ್ಪನ ಸಂಚಿಯಲ್ಲಿ ಎಲೆಯೂ ಅಡಕೆಯೂ ಮೂರು ಪಾಲು ಅವನ ಹಾಗೆಯೇ ವಯಸ್ಸಾದುವು. ಅವನು ಆಗಾಗ ಎಲೆ ತೆಗೆದುಕೊಳ್ಳುವುದಾದರೂ ಅಯ್ಯೋ ಇದು ಹೋಗುತ್ತದಲ್ಲಾಎಂದು ಬಹಳ ಬಾಡಿರುವ ಎಲೆಯನ್ನೇ ಹಾಕಿಕೊಳ್ಳುವನು. ಅದನ್ನು ಎಸೆಯುವುದಕ್ಕೆ ಇಷ್ಟವಿಲ್ಲ. ಬಾಡಿರುವ ಎಲೆ ಮುಗಿಯುವ ವೇಳೆಗೆ ಹೊಸದಾಗಿ ತೆಗೆದುಕೊಂಡ ಎಲೆಯೂ ಬಾಡುತ್ತಾ ಬಂದಿರುವುದು. ಅಂತು ಸಂಚಿಯಲ್ಲಿ ನಾಲ್ಕು ಹಸುರು ಎಲೆ ಇದ್ದರೂ ಅವನು ಹಾಕಿಕೊಳ್ಳುವುದು ಬಾಡಿದ ಎಲೆಯನ್ನೇ. ಅವನ ಸಂಚಿಯ ಅಡಕೆಯೂ ಪ್ರಸಿದ್ಧ. ಅಡಕೆ ಎನ್ನುವುದು ಎಲೆಯೊಡನೆ ಅಗಿದು ನುಂಗುವ ಪದಾರ್ಥ ಎಂದು ತಿಳುವಳಿಕೆಯಿಲ್ಲದವರ ಭಾವನೆ. ಅಡಕೆಯ ಉದ್ದೇಶ ಮುಖ್ಯವಾಗಿ ಬಾಯಲ್ಲಿ ನೀರೂರಿಸುವುದು ಮಾತ್ರ. ತಾನು ನೀರಾಗುವುದಲ್ಲ. ಬಹಳ ಹೊತ್ತು ಬಾಯಲ್ಲಿಟ್ಟುಕೊಂಡು ನೀರೂರಿ ನೆನೆದ ಮೇಲೆ ಅದು ಎಲೆಯೊಂದಿಗೆ ಚೂರ್ಣವಾಗಬೇಕು. ಬಾಯಿಗೆ ಹಾಕಿಕೊಂಡು ಸುಣ್ಣದಕಾಯಿಯಿಂದ ಸ್ವಲ್ಪ ಸುಣ್ಣವನ್ನು ತೆಗೆದುಕೊಂಡು ''ಆದಿರಲಿ, ನಾನು ನಿನಗೆ ಒಂದು ಮಾತು ಹೇಳಬೇಕು ಅಂತ ಬಂದೆ'' ಎಂದೆ.

ರಂಗಪ್ಪ : ಏನು ಮಾತು ಅಂಜಪ್ಪ? ಹೇಳು. ನೀನು ಅನುಭವಸ್ಥ. ನಮ್ಮಂತವರಿಗೆ ತಿಳಿಯಬೇಕಾದ್ದು ನಿನಗೆ ನೂರು ಮಾತು ಗೊತ್ತಿದೆ.

ಅಂಜಪ್ಪ : ಅದಕ್ಕಾಗಿಯೇ ನಾ ಬಂದದ್ದು. ನೀನು ಮೇಸ್ಟ್ರೀಟಾಗಿದ್ದೀಯಲ್ಲಾ. ಜನರು ಎದುರಿಗೆ ಬಂದಾಗ ಇವರು ಸತ್ಯವಂತ್ರು, ಅವರು ಕಳ್ರು, ಅಂತ ಸರಿಯಾಗಿ ತಿಳಿದು ಶಿಕ್ಷೆ ಕೊಡಬೇಕು. ಈ ಪೋಲಿಸೋರೂ ಲಾಯರೀಗಳೂ ಹೇಳೋ ಮಾತು ಕೇಳಿಬಿಟ್ಟು ಶಿಕ್ಷೆ ಕೊಡಬಾರದು. ಅದನ್ನು ನಿನಗೆ ಹೇಳೋಕೆ ಬಂದೆ.

ರಂಗಪ್ಪ : ಅದೇನೋ ಸರಿ. ಆದರೆ ಸತ್ಯವಂತ್ರು ಕಳ್ರು ಅನ್ನೋದು ಅವರ ಮಾತು, ಇದರ ಮಾತಿನಿಂದ ತಿಳಿಯಬೇಕು. ಮೇಸ್ಟ್ರೀಟು ಇನ್ನೇನು ಮಾಡೋಕೆ ಆಗ್ತದೆ.

ಅಂಜಪ್ಪ : ಮೇಸ್ಟ್ರೀಟು ಅಂದಮೇಲೆ ನಿಜ ಹೇಗಿರಬಹುದು ಎಂತ ಯೋಚನೆ ಮಾಡಬೇಕು. ಎದುರಿಗೆ ಬಂದಿರೋ ಮನುಷ್ಯನನ್ನ ಏನು ಅಂತ ಕೇಳಬೇಕು.

ರಂಗಪ್ಪ : ಅಂಜಪ್ಪಾ ನೀನು ಕೋಪಿಸಿಕೋಬೇಡ. ನಿನ್ನ ಒಂದು ಮಾತು ಕೇಳ್ತೇನೆ.

ಅಂಜಪ್ಪ : ಏನು ಕೇಳಪ್ಪ, ಕೋಪ ಯಾಕೆ ?

ರಂಗಪ್ಪ : ನಿನ್ಮೇಲೆ ಯಾವಾಗಲಾದರೂ ಮೇಸ್ಟ್ರೀಟ್ ಫಿರ್ಯಾದಿಗಿತ್ತೆ ?

ಅಂಜಪ್ಪ : ಸೈ, ನನ್ನ ಮಂತಕಾರಿ, ಅದ್ನೇ ಅಣ್ಣ ನಾನು ಹೇಳೋಕೆ ಬಂದಿದ್ದು ನಿನ್ಗೆ. ಒಂದು ಕೋಳಿ ಕದ್ದೆ ಅಂತ ಫಿರ್ಯಾದು ಮಾಡಿದರು. ಕದೀಲಿಲ್ಲ ಅಂತ ನಾನು. ಕದ್ದ ಅಂತ ಅವರು. ಕೊನೆಗೆ ನಾನು

ತಪ್ಪಿತಸ್ತ ಅಂತ ಮಾಡಿದರು. ಇಪ್ಪತ್ತು ರೂಪಾಯಿ ಜುಲ್ಮಾನೆ ಕೊಟ್ಟರೆ ಹಾಗೇ ಬೀಡುತ್ತೀವಿ. ಆಗದಿದ್ದರೆ ಜೈಲು ಅಂದರು. ಜುಲ್ಮಾನೆ ಕೊಟ್ಟು ಮಾನವಾಗಿ ಬಂದೆ.

ರಂಗಪ್ಪ : ನೀನು ಕೋಳಿ ಕದ್ದೆ. ಅಂತ ಅವರು ಹ್ಯಾಗೆ ಹೇಳಿದರು? ಕೋಳಿ ನಿನ್ನ ಹತ್ತಿರ ಇತ್ತೇನು?

ಅಂಜಪ್ಪ : ಇತ್ತು ನನ್ನಪ್ಪ. ಹಾಳುಮುಂಡೇ ಕೋಳಿ ನನ್ನ ತಾ ಇರೋವತ್ತಿಗೇ ಅಲ್ಲವಾ ನಾನು ಸಿಕ್ಕೊಂಡದ್ದು.

ರಂಗಪ್ಪ : ಇನ್ನು ಅಪ್ಪ ನಾನು ಹೇಳೋದೂ. ಕೋಳಿ ನನ್ನ ತಾವಿತ್ತು. ಆದ್ರೆ ನಾನು ಅದನ ಕದೀಲಿಲ್ಲ.

ರಂಗಪ್ಪ : ''ಹಾಗಾದ ಮೇಲೆ ಏನು ಸಮಾಚಾರ ಸರಿಯಾಗಿ ಹೇಳಿಬಿಡು ಕೇಳೋಣಂತೆ'' ಎಂದ, ಅಂಜಪ್ಪ ಹೇಳಿದ.

ಇದು ನಡೆದದ್ದು ಸುಮಾರು ನಲವತ್ತು ವರುಷದ ಹಿಂದೆ ಇರಬಹುದು. ಆಗ್ಗೆ ಅಂಜಪ್ಪನಿಗೆ ಮಧ್ಯದ ವಯಸ್ಸು. ಆಗಿನ ದಿವಸಕ್ಕೆ ಅವನು ತನ್ನ ಕಸಬಿಗಾಗಿ ಊರು ಊರು ಸುತ್ತುತ್ತಾ ಇದ್ದ. ಜೋಗಿಯವರ ಕಸಬು ಅಂದರೆ ಸೊಗಸಾಗಿ ವೇಷ ಹಾಕಿಕೊಂಡು ಎಡಹೆಗಲಿಗೆ ಕಿಂದರಿ ತೂಗುಹಾಕಿಕೊಂಡು ತಾತನ ಕಾಲದಿಂದ ಬಂದ ಪದಗಳನ್ನ ಹಾಡುತ್ತಾ ಊರೆಲ್ಲಾ ಭಿಕ್ಷೆ ಎತ್ತುವುದು ಅಂಜಪ್ಪನ ತಾತ ಮುತ್ತಾತನ ಕಾಲಕ್ಕೆ ಜೋಗಿಗಳು. ಭಿಕ್ಷೆ ಎತ್ತುವುದು ಹೊರತು ನೆಲ ಉತ್ತದ್ದಿಲ್ಲ. ಈಚೆಗೆ ಕಾಲ ಕೆಟ್ಟುಹೋಗಿ ಜೋಗಿಗಳೂನೂ ಸಾಗುವಳೀ ಕೆಲಸ ಮಾಡುತ್ತಾ ಇದ್ದಾರೆ. ಅಂಜಪ್ಪ ಇದನ್ನು ''ಬ್ಯಾಮಣರು ಪ್ಯಾಟೆಗಳಾಗೆ ಜೋಡಿನ ಅಂಗಡಿ ಇಟ್ಟಿರೋಹಂಗೆ'' ಅಂತ ವರ್ಣಿಸುತ್ತಾನೆ. ಭಿಕ್ಷೆಬೇಡಬೇಕು ಅಂದರೆ ನೀಚವೃತ್ತಿ ಎಂದು ನಾವು ತಿಳಿಯಬಹುದು. ಅಂಜಪ್ಪ ಈ ಮಾತನ್ನು ಒಪ್ಪುವವನಲ್ಲ. ''ಜೋಗಿ ಅಂದ್ರೆ ಏನು ಸುಮ್ಮನೆ ಆಯಿತ ? ಇಪ್ಪತ್ತು ವರ್ಷ ಅಪ್ಪ ಜೊತೆಗೋ ಮಾವನ ಜೊತೆಗೋ ಕಿಂದ್ರಿ ಹೊತ್ತುಕೊಂಡು ತಿರುಗಿ, ಹಾಡೋ ಪದಾನ ಜೊತೆಗೆ ಹಾಡ್ತಾ, ಕಸಬು ಕಲಿಯೋದು ಅಂದ್ರೆ ಬಿಟ್ಟೀಯಾಯ್ತೇನಪ್ಪ? ಯಾವ ಹೈದಾಬೇಕಾದ್ರೂ ನೇಗಿಲ ಹಿಂದೆ ನಿಂತುಕೊಂಡು ಎತ್ತಿನ ಬಾಲ ತಿರುವಿ ಚೋ ಚೋ ಎನ್ನಬಹುದು. ಪದಾ ಕಲಿಯೋದ್ಕೆ ನಾಲ್ಗೆ ಬೇಡಾ? ಬುದ್ಧಿ ಬೇಡಾ? ಉಂ ಅಂದ್ರೆ ಬಂದುಬಿಡ್ತದೆಯಾ? ಲಕ್ಷ್ಮೀ ಅಂತಾ ಅನ್ನೋದಕ್ಕೆ ಎಲ್ಲಾರಿಗೂ ಬರ್ತಾದೆಯಾ? ಅನ್ನು ಅಂತ ಕೇಳು, ಕ್ಷ್ಮೀ ಕ್ಷ್ಮೀ ಅಂತ ಸೀನುತಾರೆ. ದ್ರೌಪದದೇವಿ ಅನ್ನೋಕೆ ಬಾಯಿ ತಿರುಗೋದು ಸುಲಬಾಯ್ತಾ? ನಾನು ಕಸಬುಕಲ್ತೇ ಅನ್ನೋಕಾದ್ರೆ ನನಗೆ ಇಪ್ಪತ್ತೈದು ವರ್ಸ ಆಗಿತ್ತು. ಆಮೇಲೆ ನಮ್ಮಪ್ಪ 'ಈಗ ಪರವಾ ಇಲ್ಲ, ನೀನೊಬ್ಬನೇ ಹೋಗಬಹುದು' ಅಂತ ಬಿಟ್ಟ, ಎನ್ನುವನು. ಎಂದರೆ ಜೋಗಿಯಾಗಬೇಕಾದರೆ ಈಗ ನಾವು ಬಿ.ಎ. ಡಿಗ್ರಿ ಪಡೆಯಬೇಕಾದರೆ ಹೇಗೋ ಹಾಗೆ ಕಷ್ಟ. ಅಂಜಪ್ಪ ನಮ್ಮ ಸುತ್ತಿನ ಅರವತ್ತು ಎಪ್ಪತ್ತು ಗ್ರಾಮಗಳಲ್ಲಿ ಓಡಿಯಾಡುತ್ತಿದ್ದನೆಂದು ನನಗೆ ತೋರುತ್ತದೆ. ಜೋಗಿಯಾದವನು ಮನೆ ಬಿಟ್ಟು ಹೊರಡಬೇಕಾದರೆ ಎಲ್ಲಾ ಭಿಕ್ಷುಕರ ಹಾಗೆ ಹೊರಡುವುದಕ್ಕಿಲ್ಲ. ನಾಟಕದಲ್ಲಿ ರಾಜನ ಪಾತ್ರವನ್ನು ವಹಿಸುವವನು. ಹೇಗೆ ಮುಖಕ್ಕೆ ಕೆನ್ನೆ ಮೀಸೆ ತುಟಿಗೆ ಬಣ್ಣಗಳನ್ನು ಹಾಕಿಕೊಳ್ಳುವನೋ ಹಾಗೆ ಹಾಡುವುದಕ್ಕೆ ಹೋಗುವ ಜೋಗಿ ಸಂಪ್ರದಾಯದ ಪ್ರಕಾರ ಅಲಂಕಾರ ಮಾಡಿಕೊಳ್ಳಬೇಕು. ಜೋಗಿ ಶೈವನೂ ಅಲ್ಲ ವೈಷ್ಣವನೂ ಅಲ್ಲ; ಕ್ಷುದ್ರ ದೇವತೆಗಳನ್ನು ಪೂಜಿಸುವವನೂ ಅಲ್ಲ; ಇದಿಷ್ಟರಲ್ಲಿ ಯಾವುದನ್ನೂ ಬಿಟ್ಟವನೂ ಅಲ್ಲ. ಆದದ್ದರಿಂದ ಅವನು ಮುಖದ ಮೇಲೆ ವಿಭೂತಿ ಕುಂಕುಮ ಅರಿಸಿನ ಈ ಮೂರೂ ಬರೆತಿರುವುವು. ಜೊತೆಗೆ ಕಾಡಿಗೆ, ಜೋಗಿಯ ಕಣ್ಣು ಬಹು ಕ್ರೂರವಾದದ್ದು. ಅದರಿಂದ ಜನಕ್ಕೆ ಕೇಡಾಗದೆ ಇರುವುದಕ್ಕೆ ಅವನು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡೇ ತಿರುಗುವನು. ಅದರಲ್ಲಿಯೂ ಆ ಪದಗಳನ್ನು ಹೇಳುವ ಹೊತ್ತಿನಲ್ಲಿ ಭೀಮ ಹನುಮಂತರ ಪಾತ್ರಗಳ ಮಾತನ್ನು ಹೇಳುವಾಗ ಕಣ್ಣಿಗೆ ಕಾಡಿಗೆ ಇರದೇ ಇದ್ದರೆ ಆ ತೀಕ್ಷ್ಣವಾದ ದೃಷ್ಟಿ ಏನಾದರೂ ಜನಕ್ಕೆ ಸೋಕಿದರೆ ಅವರು ಅಲ್ಲಿಯೇ ಮೂರ್ಛೆ ಹೋದಾರು. ಮುಖಕ್ಕೆ ಒಂದು ಅಲಂಕಾರವಿರುವ ಹಾಗೆ ಆ ಬಟ್ಟೆಯೂ ಒಂದು ರೀತಿಯದಾಗಿರಬೇಕು. ರುಮಾಲು ಮೂರು ಬಣ್ಣಕ್ಕೆ ಕಡಮೆ ಇಲ್ಲದೆ ಬಣ್ಣಗಳ ಚಿಂದಿಗಳಿಂದ ಮಾಡಿದ್ದಾಗಿರಬೇಕು. ಅಂಜಪ್ಪ ಪ್ರಾಯದಲ್ಲಿ ನೋಡವುದಕ್ಕೆ ಚೆನ್ನಾಗಿದ್ದ. ಈ ವೇಷವನ್ನು ಹಾಕಿಕೊಂಡು ಅವನ ಪದ ಹೇಳುತ್ತಾ ಬಂದರೆ ಊರಿನ ಹೆಂಗಸರು ಮಕ್ಕಳು ಅವನನ್ನು ಸುಮ್ಮನೆ ಸುತ್ತಿಕೊಳ್ಳುವರು. ದೊಡ್ಡ ಗೌಡರ ಮನೇ ಮುಂದೆ ಎಲ್ಲಾ ಹೆಂಗಸರು ಅವನನ್ನು ಕೂರಿಸಿ ಪದವನ್ನು ಹೇಳಿಸಿ ಕಳುಹಿಸುವರು. ''ನಾನು ಬಹಳಾ ಪದಾ ಹೇಳಿವ್ನಿ ಬಹಳಾ ಜನಕ್ಕೆ ಸಂತೋಸ ಪಡಿಸಿವ್ನಿ'' ಎಂತ ಅಂಜಪ್ಪ ಆಗಾಗ ಹೇಳುತ್ತಾನೆ. ಈ ನಲವತ್ತು ವರ್ಷದ ಹಿಂದೆ ಅಂತ ಅನ್ನೋ ಕಾಲದಲ್ಲಿ ಇವನ ಜೋಗಿ ಕಸಬು ಬಹಳ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು. ಇವನು ಬಹಳ ಜನಕ್ಕೆ ಬೇಕಾಗಿದ್ದನು.

ಇವನು ಹೋಗುತ್ತಿದ್ದ ಊರುಗಳಲ್ಲಿ ಕಾಳಾಪುರ ಒಂದು, ನಾನು ಊರಿನ ಹೆಸರನ್ನು ನಿಜವಾಗಿ ಹೇಳುತ್ತಿಲ್ಲ. ಕಾಳಾಪುರ ಎಂದು ಒಂದು ಊರು ಇದ್ದರೆ ನಾನು ಹೇಳುತ್ತಿರುವುದು ಆ ಊರನ್ನು ಅಲ್ಲವೆಂದು ತಿಳಿಯಬೇಕು. ನಾನು ಹೇಳುವುದು ಒಂದು ಊಹೆಯ ಹೆಸರು. ಕಾಳಾಪುರ ತಕ್ಕಮಟ್ಟಿಗೆ ದೊಡ್ಡ ಊರು. ಆದದ್ದರಿಂದ ಅಂಜಪ್ಪ ಹೋದಾಗ ಎರಡು ದಿವಸ ಮೂರು ದಿವಸ ಇದ್ದು ಬಿಡುವುದೂ ಉಂಟು. ಅಂಜಪ್ಪ ನೋಡುವುದಕ್ಕೆ ಚೆನ್ನಾಗಿದ್ದನೆಂದು ಹೇಳಿದೆನಷ್ಟೆ. ಅದು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಮಾತು. ಇದರ ಜೊತೆಗೆ ಇವನು ಅಲಂಕಾರ ಬೇರೆ ಮಾಡಿಕೊಂಡು ಹಳ್ಳಿಗೆ ಹೋದರೆ ಇವನ ರೂಪಕ್ಕೆ ಮೆಚ್ಚುವ ಹಳ್ಳಿಯ ಹೆಂಗಸರು ಇರುತ್ತಿದ್ದುದ್ದು ನಾಟಕದಲ್ಲಿ ಸುಂದರವಾದ ನಟನನ್ನು ಮೆಚ್ಚುವ ಸ್ತ್ರೀಯರಿರುವಂತೆ ಸಹಜವಾದದ್ದೇ. ಸ್ವಲ್ಪ ವಯಸ್ಸಾದ ಹೆಂಗಸರಾದರೆ ಅವರ ಜೊತೆಗೆ ಕೂತು ಮಾತನಾಡುವುದಕ್ಕೆ ಅಂಜಪ್ಪ ಹಿಂತೆಗೆಯುತ್ತಿರಲಿಲ್ಲ. ಯಾಕೆಂದರೆ, ಇವನ ಸಂಗಡ ಮಾತನಾಡಿದ್ದಕ್ಕಾಗಿ ಅವರನ್ನು ಗದರಿಸುವವರು ಇರುತ್ತಿರಲಿಲ್ಲ. ಸ್ವಲ್ಪ ಚಿಕ್ಕ ವಯಸ್ಸಿನವರಾದರೆ ಅಂಜಪ್ಪ ಹಿಂತೆಗೆಯುತ್ತಿದ್ದ. ಮನೆಯ ಗಂಡಸರು ನೋಡಿದರು. ''ಏನಯ್ಯ ಜೋಗಿ, ಭಿಕ್ಷೆ ತೆಗೆದುಕೊಂಡು ಹೋಗುವುದು ಬಿಟ್ಟು ಮನೆ ಹೆಂಗಸರ ಕೂಡ ಸರಸವಾಡುತ್ತಾ ಇದ್ದೀಯಾ? ನಡಿ ಆಚೆಗೆ'' ಎನ್ನುವರು. ಹೊರಗಿನವರು ಕಂಡರು : ''ಏನು ಜೋಗಪ್ಪಾ ಪರವಾಯಿಲ್ಲ'' ಎಂದು ನಗುವರು. ಭಿಕ್ಷೆಯಿಂದ ಜೀವಿಸುವ ಮನುಷ್ಯನಿಗೆ ಈ ಎರಡು ಮಾತೂ ಕಷ್ಟವೇ. ಕಾಳಾಪುರದಲ್ಲಿ ಒಂದು ಸಲ ಇವನು ಹೋಗಿದ್ದಾಗ ಆ ಊರಿನ ಗೌಡನ ಹೆಂಡತಿ ಇವನನ್ನು ಕೂರಿಸಿಕೊಂಡು ಪದ ಕೇಳಿದಳಂತೆ ಗೌಡನಿಗೆ ಅವಳು ಮೂರನೆಯ ಹೆಂಡತಿ. ಪದ ಹೇಳಿದ ಮೇಲೆ ಅವಳು ಇವನಿಗೆ ಸ್ವಲ್ಪ ಎಲೆ ಅಡಕೆ ಕೊಟ್ಟಳು. ಇವನ ಹಾಕಿಕೊಂಡು ಸ್ವಲ್ಪ ಹೊತ್ತು ಕುಳಿತ. ಮಧ್ಯೆ ಗೌಡ ಬಂದು ಇವನ ಮೇಲೆ ಬಹಳ ಕೋಪಿಸಿಕೊಂಡ. ಅಂಜಪ್ಪ ಸಾಮಾನ್ಯವಾಗಿ ಬದಲು ಹೇಳುವವನಲ್ಲ. ಗೌಡ ಸ್ವಲ್ಪ ಕೆಟ್ಟ ಮಾತು ಹೇಳಿದ್ದರಿಂದ ಇವನಿಗೂ ರೇಗಿತು. ''ನನ್ನ ಏನೋ ಮಾತಾನಾಡಿಬಿಟ್ಟರಿ, ಗೌಡರೇ, ನೀವು ನಿಮ್ಮ ಹೆಂಡಿರನ್ನ ಏನೆಂದು ತಿಳಿದುಕೊಂಡಿದ್ದೀರ? ನೀವು ಮಾನವಂತರಾದರೆ ನಿಮ್ಮ ಹೆಂಡರಿಗೆ ಹೇಳಿರ, ನನ್ನಾಕೆ ಬಯ್ತಾರ'' ಎಂದ. ಗೌಡ ಎಚ್ಚರಿಕೆಯಿಂದ ಇರು ಜೋಗೀ, ಯಾವಾಗಲಾದರೂ ಬಲಿಹಾಕಿ ಬಿಟ್ಟೇನು'' ಎಂದ, ಅಂಜಪ್ಪ ತಾನೂ ಬದಲಿಗೆರಡು ಮಾತು ಹೇಳಿ ಜೋಳಿಗೆ ತೆಗೆದುಕೊಂಡು ಹೊರಟುಹೋದ.

ಇದಾದ ಮೇಲೆ ಅಂಜಪ್ಪ ಕಾಳಾಪುರಕ್ಕೆ ಒಂದು ಸಲವೋ ಎರಡು ಸಲವೋ ಹೋಗಿದ್ದ. ಏನೂ ವಿಶೇಷ ನಡೆಯಲಿಲ್ಲ. ಮೂರನೆಯ ಸಲ ಹೋಗಿದ್ದಾಗ ಆ ಊರಿನ ಎಂಥದೋ ಕೇರಿಯಲ್ಲಿ ಒಂದು ಜಗಲಿಯ ಮೇಲೆ ಕೂತು ಪದ ಹೇಳುತ್ತಿರಬೇಕಾದರೆ ಪಕ್ಕದ ಮನೆ ಹೆಣ್ಣು ಒಬ್ಬಳು. ಪದವನ್ನು ಕೇಳುತ್ತಾ ಅವರ ಬಾಗಿಲಲ್ಲಿ ನಿಂತುಕೊಂಡಳು. ಪದವನ್ನು ಮುಗಿಸಿ ಜೋಗಿ ಹೊರಡುವುದರಲ್ಲಿ ಇದ್ದನು. ಆಗ ಅವಳು

ಅವನನ್ನು ಕರೆದು ಅವನಿಗೆ ಭಿಕ್ಷೆ ಹಾಕಿದಳು. ಮಾರನೆಯ ದಿವಸ ಅಂಜಪ್ಪ ಅಲ್ಲಿಗೆ ಹೋಗಿ ಪದ ಹೇಳಿದ. ಆ ಹೆಣ್ಣು ಅವನನ್ನು ಕರೆದು ತನ್ನ ಮನೆಯ ಹತ್ತಿರ ಕೂರಿಸಿ ಪದ ಹೇಳಿಸಿ ಭಿಕ್ಷೆ ಹಾಕಿದಳು. ಅದು ಹಳ್ಳಿಗೆ ತಕ್ಕ ಮಟ್ಟಿಗೆ ದೊಡ್ಡ ಮನೆ. ಅಂಜಪ್ಪ ಅದು ಯಾರ ಮನೆ ಎಂದು ವಿಚಾರಿಸಿದ. ಆ ಹುಡುಗಿ ಯಾರ ಮಗಳೆಂದು ವಿಚಾರಿಸಿದ. ಯಾರದೋ ಮನೆ. ಅದರ ಹೆಸರು ನನಗೆ ಈಗ ಜ್ಞಾಪಕವಿಲ್ಲ, ಅವರು ಪುಣ್ಯವಂತರು. ಆ ಹುಡುಗಿಯ ಗಂಡ ಪೋಲೀ ಬಿದ್ದಿದ್ದ. ಹುಡುಗಿ ಅಷ್ಟೇನೂ ಒಳ್ಳೆಯವಳಲ್ಲವಂತೆ, ಅದು ಅಂಜಪ್ಪನಿಗೆ ಆಗ ತಿಳಿಯದು, ಮನೆಯಲ್ಲಿ ಆ ಹುಡುಗಿ, ಅವಳ ಗಂಡ, ಅವಳ ಅತ್ತೆ, ಮೂರೆ ಜನ, ಅವರು ಕೋಳಿ ಸಾಕುತ್ತಾ ಇದ್ದರು. ಕೋಳೀ ವ್ಯಾಪಾರವನ್ನೂ ಮಾಡುತ್ತಾ ಇದ್ದರಂತೆ, ಅಂಜಪ್ಪ ಆಮೇಲೆ ಕಾಳಾಪುರಕ್ಕೆ ಹೋದಾಗ ಪುನಃ ಅವರ ಮನೆಗೆ ಹೋದ. ಹುಡುಗಿ ಬಹಳ ಚೆನ್ನಾಗಿರುವವಳು. ಅಂಜಪ್ಪನಿಗೆ ಕೆಟ್ಟ ಉದ್ದೇಶವೇನೂ ಇಲ್ಲ. ಆದರೆ ಅವಳು ಬಹಳ ಮೆಚ್ಚುವುದರಿಂದ ಅವಳಿಗೆ ಪದ ಹೇಳಬೇಕು. ಅವಳು ಸಂತೋಷ ಪಡುವುದನ್ನು ನೋಡಬೇಕು, ಎಂದು ಇವನಿಗೆ ಚಪಲ, ಕೇರಿಯ ಜನಕ್ಕೆ ಪದ ಹೇಳಿ ಅವರೆಲ್ಲಾ ಹೊರಟು ಹೋದ ಮೇಲೆ ಅಂಜಪ್ಪ ಈ ಹುಡುಗಿಯ ಮನೆ ಬಾಗಿಲಿನ ಮುಂದೆ ಕುಳಿತು ಎಲೆ ಅಡಕೆ ಹಾಕಿಕೊಳ್ಳುತ್ತಿದ್ದ. ಸ್ವಲ್ಪ ಹೊತ್ತಿನ ಮೇಲೆ ಹುಡುಗಿ ಬಾಗಿಲ ಬಳಿ ಬಂದು ''ಜೋಗ್ಯಪ್ಪ ನೀನು ಈ ಊರಿಂದ ಕೆಡೆದು ಹೋಗುವಾಗ ಹೀಗೇ ಬಂದು ಹೋಗು'' ಎಂದಳು. ಅಂಜಪ್ಪ ''ಯಾಕಮ್ಮಾ ನಾನು ಈಗ ಹೊರಡುವನೆ'' ಎಂದ. ಅವಳು ''ನಿನ್ನ ಪದ ಕೇಳಿ ಬಹಳ ಸಂತೋಷ ಆಯ್ತು, ನಿನಗೇನಾದರೂ ಕೊಡೋಣಾಂತ ಬಹಳ ಸಲಾ ಅಂದುಕೊಂಡೆ, ಅಂದರೆ ನೀನು ಅದನ್ನು ತೆಕ್ಕೊಂಡು ಬೇಗನೆ ಹೊರಟುಬಿಡಬೇಕು. ನಮ್ಮತ್ತೆಗೆ ತಿಳಿದರೆ ತಂಟೆ ಮಾಡ್ತಾಳೆ'' ಎಂದಳು, ಅಂಜಪ್ಪನಿಗೆ ತೆಗೆದುಕೊಳ್ಳುವುದಕ್ಕೆ ಭಯ. ಒಲ್ಲೆ ಎನ್ನುವುದಕ್ಕೆ ಇಷ್ಟವಿಲ್ಲ. ಆದರೆ ಇವನು ಏನು ಹೇಳುವುದಕ್ಕೂ ಮುಂದಾಗಿ ಹುಡುಗಿ ಒಳಗೆ ಅಲ್ಲಿಂದ ''ಜೋಗ್ಯಪ್ಪಾ ಇಲ್ಲಿ ಬಾ'' ಎಂದಳು. ಇವನು ಒಳಗೆ ಹೋದ. ಹುಡುಗಿ ಒಂದು ಕೋಳಿಯನ್ನು ಇವನ ಜೋಳಿಗೆ ಒಳಕ್ಕೆ ಹಾಕಿದಳು. ''ಹೊರಟ್ಹೋಗು'' ಎಂದಳು. ಈಗ ಯಾರಾದರೂ ಹಿಡಿದರೆ ಏನು ಗತಿ ಎಂತ ಅವನಿಗೆ ಎದೆ ದವಡದ ಬಡಿದುಕೊಳ್ಳುತ್ತಿತ್ತು. ಹುಡುಗಿ ಒಳಗಿಂದ ''ಭದ್ರ ಜೋಗ್ಯಪ್ಪಾ ನಾನು ಕೊಟ್ಟೆ ಎಂತ ಯಾರಿಗಾದರೂ ಹೇಳೀಯ'' ಎಂದು ಹೇಳಿದಳು. ಅಂಜಪ್ಪ ಏನೂ ಮಾತಾಡದೆ ಬೇಗನೆ ಹೊರಟುಬಿಟ್ಟ. ಊರಿನ ಹೊರಗಡೆ ಅರ್ಧ ಮೈಲಿ ದೂರದಲ್ಲಿ ಒಂದು ಭಾವಿ. ಅಲ್ಲಿಯವರೆಗೆ ಒಂದೇ ಸಮ ನಡೆದು ಒಂದು ಮರದ ನೆರಳಲ್ಲಿ ಕುಳಿತುಕೊಂಡು ಈ ನಡೆದ ಸಮಾಚಾರವನ್ನು ನೆನೆಯುತ್ತಾ ಎಲೆ ಅಡಕೆ ಮೆಲ್ಲುತ್ತಿದ್ದ.

ಅಂಜಪ್ಪನಿಗೆ ಇದರ ಹಾಗೆ ಆ ಮೊದಲು ಆಗಿರಲಿಲ್ಲ. ಅವನಿಗೆ ತಿರುಗಿ ಹಾಗಾಗಬಾರದು ಎನ್ನಿಸಿತು. ಕೋಳಿ ಏನೋ ಒಳ್ಳೇ ಪದಾರ್ಥ. ಅದನ್ನು ಜೋಗಿಗೆ ಸುಮ್ಮನೆ ಯಾರು ಕೊಡಬೇಕು? ಆದರೆ ಕಂಡಹಾಗೆ ಕೊಡೋ ಭಿಕ್ಷ ಒಂದು ಮಾದರಿ. ಹೀಗೆ ಮರೆಯಿಂದ ಕೊಡೋ ಭಿಕ್ಷ ಒಂದು ಮಾದರಿ. ಅದರಲ್ಲಿ ಮೋಸ ಇಲ್ಲ. ಇದರಲ್ಲಿ ಮೋಸ ಸೇರಿ ಹೋಯಿತು. ಅಂಜಪ್ಪನಿಗೆ ಆ ಹುಡುಗಿಯ ವಿಷಯದಲ್ಲಿ ಅಚ್ಚು ಮೆಚ್ಚಾಗಿತ್ತು. ಎಂಥ ಒಳ್ಳೆಯ ಹುಡುಗಿ. ಎಂಥ ಚೆನ್ನಾದ ಹುಡುಗಿ, ಒಳ್ಳೇ ಮಾಗಿದ ನಿಂಬೇ ಹಣ್ಣಿನ ಹಾಗೆ ಇದ್ದಳು. ಇಂಥ ಹೆಂಡತೀನ ಮನೇಲಿಟ್ಟುಕೊಂಡು ಅದೇಕೆ ಅವಳ ಗಂಡ ಪೋಲಿ ತಿರುಗುತ ಇದ್ದಾನೆ ಎಂದು ಅವನಿಗೆ ಯೋಚನೆ ಬಂತು. ಪ್ರಪಂಚವೇ ಹೀಗೆ. ಪುಣ್ಯವಂತರಾದರೆ ಪೋಲಾಟ, ಬಡವರಾದರೆ ಕಳ್ಳತನ.

ಅಂಜಪ್ಪ ಈ ವಿಷಯವನ್ನೆಲ್ಲಾ ಮನಸ್ಸಿನಲ್ಲಿ ತಿರುವಿಹಾಕುವುದರಲ್ಲಿ ತಾನು ಅಲ್ಲಿರುವುದು ಕ್ಷೇಮವಲ್ಲವೆನ್ನುವುದನ್ನು ಮರೆತನು. ಸ್ವಲ್ಪ ಹೊತ್ತಿನ ಮೇಲೆ ಯಾರೋ ಒಬ್ಬ ಊರಿನ ಕಡೆಯಿಂದ ಬಂದು ಇವನ ಬಳಿ ನಿಂತು ''ಏನು ಜೋಗ್ಯಪ್ಪ ಕುಂತುಕೊಂಡ'' ಎಂದನು. ಅಂಜಪ್ಪ ''ಕುಂತುಕೊಂಡೆ ಅಪ್ಪ'' ಎಂದ, ಹಳ್ಳಿಯವನು ''ಜೋಳಿಗೆ ತುಂಬಿತೋ'' ಎಂದ. ಅಂಜಪ್ಪ ''ಸಾಮಾನ್ಯ'' ಎಂದ, ಹಳ್ಳಿಯವನು ಇದೇನು ರಾಗಿನೋ ಎಂತ ಜೋಳಿಗೆ ಬಾಯಿ ತೆರೆದು ಅದನ್ನು ಇಣಕಿ ನೋಡಿದ. ಅದರಲ್ಲಿ ಕೋಳಿ, ಬಂದವನು ''ಇದೇನು ಜೋಗ್ಯಪ್ಪ ಕೋಳಿ ಅದೆ'' ಎಂದ ಜೋಗಿಗೆ ಎದೆ ಝುಗ್ಗೆಂದಿತು. ಅವನು ''ಹೌದಪ್ಪ ಅಲ್ಲೊಬ್ಬರ ಮನೆಯಲ್ಲಿ ಕೊಟ್ರು'' ಎಂದ. ಇನ್ನು ಮಾತನಾಡುತ್ತಾ ಕುಳಿತರೆ ಯಾರು ಎಂತ ಚರ್ಚೆ ಬರುವುದೆಂದು ಎದ್ದು ಜೋಳಿಗೆಯನ್ನು ಹೆಗಲ ಮೇಲೆ ಹಾಕಿಕೊಂಡು ಹೊರಡಲು ಸನ್ನದ್ಧನಾದ. ಈ ಹೊತ್ತಿಗೆ ಊರ ಕಡೆಯಿಂದ ಒಬ್ಬ ವಯಸ್ಸಾದ ಹೆಂಗಸು ಜೊತೆಯಲ್ಲಿ ಯಾವನೋ ಒಬ್ಬನನ್ನು ಕರೆದುಕೊಂಡು ಬೇಗಬೇಗನೆ ಇವರ ಕಡೆಗೆ ಬರುತ್ತಿರುವುದು ಕಂಡಿತು. ಅವರ ಹಿಂದೆ ಸ್ವಲ್ಪ ದೂರದಲ್ಲಿ ಇವನಿಗೆ ಕೋಳಿಯನ್ನು ಕೊಟ್ಟ ಆ ಹೆಣ್ಣು ಬರುತ್ತಿದ್ದಳು. ಅಂಜಪ್ಪನಿಗೆ ಮೊಣಕಾಲು ಹಂಜಿಯ ಹಾಗಾಯಿತು. ಹಾಗೆಯೇ ಬರುತ್ತಿದ್ದವರ ಕಡೆ ನೋಡುತ್ತ ನಿಲ್ಲಲಾಗಿ ಆ ಹೆಣ್ಣು ದೂರದಿಂದಲೇ ಇವನಿಗೆ ತಾನು ಕೊಟ್ಟ ಮಾತನ್ನು ಹೇಳಬಾರದೆಂದು ಕೈಯಾಡಿಸುತ್ತ ಸನ್ನೆ ಮಾಡಿದಳು. ಆ ಮುದುಕಿ ಹತ್ತಿರಕ್ಕೆ ಬಂದು ''ಇವನೇ ಏನೇ ಜೋಗಪ್ಪ'' ಎಂದು ಕೇಳಿದಳು. ಅವಳ ಜೊತೆಗೆ ಬರುತ್ತಿದ್ದ ಮನುಷ್ಯ ಆ ಊರಿನ ತಳಾರಿ. ಹೌದು ಎಂದು ಅವನು ಹೇಳಿದ. ಮುದುಕಿ ಇವನನ್ನು ''ಜೋಗಪ್ಪ ನಮ್ಮದೊಂದು ಕೋಳಿ ಏನಾದರೂ ಕಂಡ್ಯಾ ನೀನು'' ಎಂದು ಕೇಳಿದಳು. ಅಂಜಪ್ಪ ಅದ್ಯಾವುದೋ ಹಾಳು ಕೋಳಿ ಜೋಳಿಗೆಯೊಳಕ್ಕೆ ಬಂದು ಬಿಟ್ಟಿದೆ ! ನನಗೆ ತಿಳಿಯಲೇ ಇಲ್ಲ. ಈಗ ಈ ಅಯ್ಯ ಹೇಳ್ದ'' ಎಂದ, ಮೊದಲು ಬಂದಿದ್ದವನು ''ಯಾರೋ ಕೊಟ್ರು ಅಂದ್ನಲ್ಲಪ್ಪೋ ಎಂದ ಅಯ್ಯೋ ನಮ್ಮಪ್ಪ ಜೋಗಿಗೆ ಒಂದು ಹಿಡಿ ಅಕ್ಕಿ ಹಾಕೋದು ಕಷ್ಟ, ಕೋಳಿ ಕೊಡೋಕೆ ಬರ್ತಾರಾ'' ಎಂದ ಅಂಜಪ್ಪ. ತಳಾರಿ ಬಂದವನು ಜೋಳಿಗೇನ ತೆಗೆದ. ಒಳಗೆ ಕೋಳಿ ಮೂರ್ಛೆಯ ಸ್ಥಿತಿಯಲ್ಲಿ ಬಿದ್ದಿದೆ, ಮುದುಕಿ ''ಪರವಾಯಿಲ್ಲ. ಪದ ಹೇಳ್ತಾನೆ ಅಂತ ಮನೆ ಹತ್ರ ಬಿಟ್ಟರೆ ಕೋಳಿ ಹಾರ್ಸೋಕೆ ಮೊದಲು ಮಾಡಿದ'' ಎಂದಳು. ''ನಡೆ ಊರಿಗೆ ಗೌಡನಿಗೆ ಹೇಳೋಣ. ಚೆನ್ನಾಯ್ತು ಜೋಗಿತನ'' ಎಂದು ಇವನನ್ನು ಚೆನ್ನಾಗಿ ಬೈದಳು. ಅಂಜಪ್ಪ ''ಅಮ್ಮ ಕೋಳೀನ ನಾನು ಕದೀಲಿಲ್ಲ. ನಿನ್ನ ಕೋಳಿ ಆದರೆ ನೀನು ತಕ್ಕೊಂಡು ಹೋಗು. ನನ್ನ ತಂಟೆಗೆ ಬರಬೇಡ'' ಎಂದ. ''ಏನಯ್ಯ ಬಹಳ ಸಂಪನ್ನನ ಹಂಗೆ ಮಾತನಾಡ್ತೀಯ. ಕದಿಯದ ಹಂಗಿದ್ದರೆ ಕೋಳಿ ನಿನ್ನ ತಾವ ಹೆಂಗೆ ಬಂತು?'' ಎಂದು ಮುದುಕಿ ಹುಡುಗಿಯ ಕಡೆ ತಿರುಗಿ ''ಇದು ನಮ್ಮಲ್ಲವೇನೇ ಕೋಳಿ'' ಎಂದಳು. ಹುಡುಗಿ ''ಏನೋ ನಮ್ಮದು ಅಲ್ಲ ಅನ್ನೋ ಹಂಗದೆ, ಹೌದು ಅನ್ನೋ ಹಂಗದೆ. ಜೋಗಪ್ಪ ಎಲ್ಲಾದರೂ ಕೊಂಡುಕೊಂಡಿರಬಹುದು'' ಎಂದಳು. ತಳಾರಿ ''ಇದೆಲ್ಲಾ ಯಾವ ಮಾತು. ಊರ ಗೌಡರ ತಾವ ಹೋಗೋಣ. ಸಮಾಚಾರ ಎಲ್ಲಾ ಹೇಳೋಣ, ಅವರು ನ್ಯಾಯ ಅಂದದ್ದನ್ನು ಮಾಡ್ಲಿ'' ಎಂದ. ಅಂಜಪ್ಪನಿಗೆ ತಪ್ಪಿಸಿಕೊಂಡು ಹೋಗೋದಕ್ಕೆ ದಾರಿ ತೋರಲಿಲ್ಲ. ಗೌಡನಿಗೋ ತನ್ನಮೇಲೆ ಕೋಪ ಇದೆ ಅಂತ ಬಲ್ಲ. ಇದೇನೋ ಗ್ರಹಚಾರ ಬಂತು ಎಂತ ಅವನು ಜೋಳಿಗೇನೂ ಹೊತ್ತುಕೊಂಡು ಅವರ ಜೊತೆಗೆ ಮರಳಿ ಊರಿಗೆ ಹೋದ.

ಅಲ್ಲಿ ಆದದ್ದನ್ನೆಲ್ಲ ಹೇಳಿ ಪ್ರಯೋಜನವಿಲ್ಲ. ಊರಿನಲ್ಲಿ ಅದಕ್ಕೆ ಹಿಂದೆ ಕೋಳಿಗಳನ್ನು ಕಳೆದುಕೊಂಡಿದ್ದವರು, ಕಳೆದುಕೊಳ್ಳದೇ ಇದ್ದವರು, ಎಲ್ಲರೂ ಜೋಗಪ್ಪ ಹಿಂದೆ ಬಂದಿದ್ದ ದಿವಸ ತಮ್ಮದೊಂದು ಕೋಳಿ ಹೋದ ಹಾಗೆ ನೆನಪು ಎಂದರು. ಗೌಡ ಬಂದ; ''ಏನೋ ಜೋಗಿ, ಇಷ್ಟು ದಿನ ಹೇಳಿದ್ದು

ಪದ ಅಲ್ಲ. ಈಗ ಲಾಕಾಪಿಗೆ ಕಳಿಸ್ತೀನಿ. ಆಗ ಹೇಳು ಪದಾನ'' ಎಂದ. ಪೋಲೀಸ್ ಸ್ಟೇಷನ್ ಬಹಳ ದೂರವಿರಲಿಲ್ಲ. ಅಲ್ಲಿಗೆ ಅಪರಾಧಿಯನ್ನ ದಾಗೀನಾ ಸಮೇತ ರಿಪೋರ್ಟಿನೊಂದಿಗೆ ಕಳುಹಿಸಿಕೊಟ್ಟ ದ್ದಾಯಿತು. ಅಲ್ಲಿ ಹೇಳಿಕೆ ಕೇಳಿಕೆಗಳೆಲ್ಲಾ ಆದವು. ಅಂಜಪ್ಪ ವಿಚಾರಣೆಯ ದಿನ ಕೋರ್ಟಿಗೆ ಹಾಜರಾಗುತ್ತೇನೆ ಅಂತ ಜಾಮೀನಿನ ಮೇಲೆ ಊರಿಗೆ ಬಂದ.

ವಿಚಾರಣೆ ಆಯಿತು. ವಿಚಾರಣೆಗೆ ಏನಿದೆ? ಮುದುಕಿ ಮನೆಯಿಂದ ಕೋಳಿ ಹೋದದ್ದು ನಿಜ. ಈ ಕೋಳಿಯನ್ನು ಅವಳು ಗುರುತಿಸಿದ್ದಳು. ಅದು ಜೋಗ್ಯಪ್ಪನ ಹತ್ತಿರ ಇದ್ದದ್ದು ನಿಜ. ಅದನ್ನು ಮೂರು ಜನ ನೋಡಿದ್ದರು. ಮ್ಯಾಜಿಸ್ಟ್ರೇಟರು ಅಂಜಪ್ಪನನ್ನು ನೀನು ಏನು ಹೇಳತೀಯಾ ಎಂದ ಕೇಳಿದರು.

ಅಂಜಪ್ಪ : ಎಲ್ಲೋ ಬುದ್ಧಿ ನಾನು ಪದಾ ಹೇಳ್ತಾ ಇರಬೇಕಾದ್ರೆ ಕೋಳಿ ಬಂದು ಬೆಚ್ಚಗೆ ಆದೆ ಅಂತ ಜೋಳಿಗೆ ಒಳಗೆ ಸೇರಿಕೊಂಡಿರಬೇಕು, ನನಗೆ ತಿಳೀಲಿಲ್ಲ. ನಾನು ತಂದುಬಿಟ್ಟೆ.

ಮ್ಯಾಜಿಸ್ಟ್ರೇಟರು : ಏನು ಪುರಾಣ ಹೇಳ್ತೀ ನೀನು, ಕೋಳಿ ಬಂದು ನಿನ್ನ ಜೋಳಿಗೆ ಒಳಗೆ ಕುಳಿತುಕೊಳ್ಳುತ್ತದೆಯಾ? ಸತ್ಯಾ ಹೇಳು.

ಜೋಗಪ್ಪ : ಮಹಾಸ್ವಾಮಿ ಸತ್ಯ ಹೇಳ್ತೀನಿ. ನೀವು ಹೇಳಿದ ದೇವರ ಮೇಲೆ ಆಣೆ ಮಾಡ್ತೀನಿ. ನಾನು ಕೋಳೀ ಕದೀಲಿಲ್ಲ.

ಮ್ಯಾಜಿಸ್ಟ್ರೇಟರು : ನೀನು ಕೋಳೀ ಕದಿಲಿಲ್ಲ ಅನ್ನು, ಕೋಳಿ ಏನೋ ಜೋಳಿಗೆಗೆ ತಾನೇ ಬರಲಿಲ್ಲ, ಯಾರಾದರೂ ಕೊಟ್ರೇನೋ.

ಅಂಜಪ್ಪನಿಗೆ ಆ ಹುಡುಗಿ ಕೊಟ್ಟಳು ಎಂತ ಹೇಳಿಬಿಡಬೇಕು ಎಂದ ನಾಲಗೆಯ ಕೊನೆಗೆ ಬಂದಿತ್ತು. ಆದರೆ ಅವಳು ಯಾರಿಗೂ ಹೇಳಬೇಡ ಎಂದು ಹೇಳಿದ್ದದ್ದು. ಆಮೇಲೆ ತನಗೆ ಸನ್ನೆ ಮಾಡಿದ್ದದ್ದು, ಎಲ್ಲಾ ಜ್ಞಾಪಕ ಬಂತು. ಏನೋ ಪಾಪ, ಭ್ರಮೆಯಿಂದ ಒಂದು ಕೊಟ್ಟಳು. ಅವಳನ್ನು ಯಾಕೆ ಬಿಟ್ಟುಕೊಡಬೇಕು, ಎಂತ ಯೋಚನೆ ಬಂದು ಆ ಮಾತು ತಡೆಯಿತು. ಏನೂ ಹೇಳದೆ ಸುಮ್ಮನೆ ಇದ್ದನು. ಏನು ಹೇಳ್ತೀಯಾ ಎಂತ ಮ್ಯಾಜಿಸ್ಟ್ರೇಟರು ಪುನಃ ಕೇಳಿದರು.

ಅಂಜಪ್ಪ : ಏನು ಹೇಳ್ಲೀ ಬುದ್ಧೀ. ಧರ್ಮದ ದಣಿ. ನಿಜ ಏನು ಅಂತ ನಿಮಗೆ ದೇವರು ತಿಳಸಬೇಕು. ನಾನು ಕದಿಯಲಿಲ್ಲ.

ಮ್ಯಾಜಿಸ್ಟ್ರೇಟರು ಇವನ ಮೇಲೆ ಒಂದು ಚಾರ್ಜು ಅಂತ ಬರೆದು ನಿನ್ನ ಕಡೆ ಸಾಕ್ಷಿಗಳಿದ್ದಾರೆಯೆ ಅಂತ ಕೇಳಿದರು. ಅಂಜಪ್ಪ ''ಅಯ್ಯೋ ಮಾಸ್ವಾಮಿ, ನನಗ್ಯಾರು ಸಾಕ್ಷಿ. ದೇವರು ಸಾಕ್ಷಿ'' ಎಂದ. ಮ್ಯಾಜಿಸ್ಟ್ರೇಟರು ಕಳ್ಳನಾದರೂ ಎಷ್ಟು ನಯವಾಗಿ ಮಾತನಾಡ್ತಾನೆ ಎಂತ ಹೇಳಿ ಇಪ್ಪತ್ತು ರೂಪಾಯಿ ಜುಲ್ಮಾನೆ ತಪ್ಪಿದರೆ ಹದಿನೈದು ದಿನ ಸಜಾ ಎಂದು ಶಿಕ್ಷೆ ವಿಧಿಸಿದರು. ಅಂಜಪ್ಪ ಜುಲ್ಮಾನೆ ತೆತ್ತು, ಪೆಚ್ಚು ಮುಖ ಹಾಕಿಕೊಂಡು ಊರಿಗೆ ಬಂದ.

೩

ಇದಾಗಿ ನಾನು ಹೇಳಿದಂತೆ ನಲವತ್ತು ವರ್ಷದ ಮೇಲೆ ಆಗಿದೆ. ಅಂಜಪ್ಪ ಇದನ್ನು ಹೇಳಿ ''ಸುಮ್ಮನೆ ಮೇಸ್ಟ್ರೇಟ್ ಅಂದ್ರೆ ಏನಾಯ್ತಪ್ಪ, ತಪ್ಪಿಗೆ ಶಿಕ್ಷೆ ಮಾಡುವುದು, ಸತ್ಯವಂತ್ರ ಕಾಪಾಡೋದು, ದೇವರ ಕೆಲ್ಸ. ಆ ಕೆಲಸ ಮನುಷ್ಯನ ಕೈಗೆ ಬಂದಾಗ ದೇವರ ಹಾಗೆ ನಡಕೋಬೇಕು ಹೆಚ್ಚು ಕಡಿಮೆ ಆದೀತು ಎಂತ ಭಯದದಲ್ಲಿರಬೇಕು. ಇಲ್ಲೀರಾ ಇದ್ರೆ ಆ ಮೇಸ್ಟ್ರೇಟ್ರು ಬೇಡಿ ಹಾಕತೇನಂದರಲ್ಲಾ, ಹಂಗೆ ಅನ್ಯಾಯ ಆದಾತು'' ಎಂದ.

ನಾನು : ನೀನು ಹೇಳೋದು ಸರಿ ಅಂಜಪ್ಪ. ಆದರೆ ಏನಾಯ್ತು. ಅಂತ ನೀನು ಹೇಳ್ದೀರಾ ಇದ್ರೆ ಮೇಸ್ಟ್ರರಿಗೆ ತಿಳೀಬೇಕು ಹೇಗೆ?

ಅಂಜಪ್ಪ : ಹೇಳೋ ಅಷ್ಟಕ್ಕೆ ನ್ಯಾಯ ಮಾಡೋದಾದ್ರೆ ನಿಮ್ಮಂತ ಬುದ್ಧಿವಂತ್ರು ಯಾಕೆ ಬೇಕು? ಸತ್ಯಾವು ಏನು ಎಂತ ತಿಳಿಕೊಳ್ಳೋದು ಮೇಸ್ಟ್ರೇಟ್ರ ಕೆಲ್ಸ.

ನಾನು : ಹುಡುಗಿ ಮರ್ಯಾದೆ ಉಳಿಸಬೇಕೂ ಅಂತ ನೀನೇ ಜುಲ್ಮಾನೆ ಕೊಟ್ಟ ಹಂಗಾಯ್ತು. ಒಳ್ಳೆದಾಯ್ತು ಬಿಡು.

ಅಂಜಪ್ಪ : ಅಯ್ಯೋ ಅದೇನ ಕೇಳ್ತೀಯಾ? ಅವಳು ಒಬ್ಬವನ ಕೂಡ ನ್ಯಾಸ್ತ ಮಾಡಿಕೊಂಡಿದ್ದಳಂತೆ, ಎರಡು ಮೂರು ಸಲ ಅವನಿಗೆ ಕೋಳಿ ಕೊಟ್ಟಿದ್ದಳಂತೆ. ಅವರತ್ತೆ ಕೋಳಿ ಏನಾದುವು, ಕೋಳಿ ಏನಾದುವು, ಎಂತ ಕೇಳ್ತಾ ಇದ್ಲಂತೆ. ಯಾರೋ ಕದ್ದಿರಬೇಕು ಅಂತ ಹುಡುಗಿ ಹೇಳ್ತಾ ಇದ್ಲು. ಆ ಅತ್ತೇಗೆ ನಂಬಿಕಾ ಇಲ್ಲ. ಒಂದು ಸಲ ಕೋಳಿ ಹೋದ ಹೊತ್ನಾಗ ಇಂಥವರ ಕೈಯಾಗ ಇದೇ ಅಂತ ತೋರಿಸಿಕೊಟ್ರೆ ತನ್ನ ಮೋಸ ಮುಚ್ಚಾದೇ ಅಂತ ಇದೆಲ್ಲಾ ಹುಡುಗೀನೇ ಮಾಡಿದಳೂ ಅಂತ ನನಗೆ ಆಮೇಲೆ ತಿಳಿಯಿತು.

ರಂಗಪ್ಪ : ಏನು? ಹುಡುಗಿ ನಿನಗೆ ಕೋಳಿ ಕೊಟ್ಟು ಅತ್ತೆಗೆ ತಾನೇ ಹೇಳಿಬಿಟ್ಲೆ?

ಅಂಜಪ್ಪ : ಊಂ, ಹಂಗೇ ಆಯ್ತು ಅಂತನ್ನು, ಅತ್ತೆ ಬಂದ್ಲು, ಕೋಳಿ ಎಲ್ಲಿ ಅಂದ್ಲು, ಸೊಸೆ, ನನಗೆ ಗೊತ್ತಿಲ್ಲ ಅಂದಳು. ಅತ್ತೆ ಹಂಗಾದ್ರೆ ಏನಾಗಿರಬೇಕು, ಅಲ್ಲಿ ಯಾರಾದರೂ ಬಂದಿದ್ರಾ, ಅಂತ ಕೇಳಿದಳು. ಸೊಸೆ ನನಗೆ ಗೊತ್ತಿಲ್ಲಾ. ಅಂದ್ಲು; ಆಮೇಲೆ, ಯಾರೋ ಜೋಗಪ್ಪ ಬಂದಿದ್ದ, ಅಂದ್ಲು. ಪಕ್ಕದ ಮನೆಯವನು, ಹೌದು ಜೋಗಿ ಇತ್ಲಾಗಿಂದ ಬಹು ಬಿರ್ನೆ ಹೋಗ್ತಾ ಇದ್ದ, ಅಂದ. ಸರಿ, ಕಾಲ ಎಲ್ಲ ಸೇರ್ರು, ನಾನು ಸಿಕ್ಕಿಬಿದ್ದೆ.

ರಂಗಪ್ಪ : ''ಆಮೇಲೆ ಹೋಗಿ ಹುಡುಗೀನ ಹೀಗೆ ಮಾಡಬಹುದೇ ಅಂತ ಕೇಳಲಿಲ್ಲವೇ'' ಅಂದ, ಅಂಜಪ್ಪ ಅಪ್ಪ, ನೀವೆಲ್ಲಾ ಹೈಕ್ಳು, ನಾನು ಮುದುಕ್ನಾದಿ. ನನ್ನ ಪ್ರಾಯದ ಮಾತು ಈಗ ಯಾಕೆ ಕೇಳೀಯಾ? ಹೋದ್ದಿ, ಕೇಳಿದ್ದಿ ಎಲ್ಲಾ ಆಯಿತು'' ಎಂದ. ನಾವು ವಿವರವನ್ನು ಕೇಳಲಿಲ್ಲ. ಕೊನೆಗೆ ರಂಗಪ್ಪ, ''ಸರಿ ಬಿಡು. ನಿನ್ನ ನನ್ನ ಹತ್ತಿರೇನಾದರೂ ತಪ್ಪಿತಸ್ಥ ಅಂತ ತಂದ್ರೇ ಸತ್ಯ ಏನು ಅಂತ ಸರಿಯಾಗಿ ತಿಳಿದುಕೊಂಡು ನಿನ್ನ ಬಿಟ್ಟುಬಿಡ್ತೀನಿ'' ಅಂದ. ಅಂಜಪ್ಪ ''ಇನ್ನ ನಾನು ನರಮನುಸನ ಮುಂದೆ ಏನು ಬಂದೇನು, ಬಿಡಪ್ಪ. ಇನ್ನು ನನ್ನ ಮೇಸ್ಟ್ರೇಟು ನಮ್ಮಪ್ಪ ತಿರುಪತಿ ವೆಂಕಟರಮಣಸ್ವಾಮಿ. ಹೋಗ್ಬೇಕು. ನಿಲ್ಲಬೇಕು; ಏನೋ ಅನ್ನೋ ಹೊತ್ಗೆ ತಪ್ಪಾಯ್ತು ಅಂತಾ ಕಾಲಿಗೆ ಬೀಳಬೇಕು. ನಮ್ಮಪ್ಪ ಕಾಪಾಡ್ತಾನೆ'' ಎಂದ. ನಾವು ಸುಮ್ಮನೆ ಇದ್ದೆವು. ಅಂಜಪ್ಪ ಇನ್ನೂ ಸ್ವಲ್ಪ ಹೊತ್ತು ಕುಳಿತಿದ್ದು ''ಅಪ್ಪೊ, ನೀನು ಮೇಸ್ಟ್ರೇಟಾದ್ದಕ್ಕೆ ನನ್ಗೆ ಒಸಿ ಎಲೆ ಅಡಕೆ ಕೊಡಲೊಲ್ಲೆಯಾ?'' ಅಂದ. ರಂಗಪ್ಪ ಹುಡುಗರನ್ನ ಕರೆದು ಅವನಿಗೆ ಸ್ವಲ್ಪ ಎಲೆ ಅಡಕೆ ಕೊಡಿಸಿದ. ಅಂಜಪ್ಪ ಅದನ್ನು ತೆಗೆದುಕೊಂಡು, ''ನಾನು ಹೇಳಿದ್ದು ಜ್ಞಾಪಕ ಇಲ್ಲಿ, ಇನ್ನ ಬರೋಣಾ'' ಎಂದು ಹೇಳಿ ಹೊರಟು ಹೋದ.

*(ಕೃಪೆ : ಮಾಸ್ತಿ ಕೆಲವು ಕಥೆಗಳು)*


TRIMURTI
JEWELLERS
GOLD AND DIAMOND
ORNAMENTS

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.) Mumbai-19.
Phone : 402 34 85

ಕೃತಿ ಸಮೀಕ್ಷೆ

# ‘ಉತ್ಸವ’ದ ಎರಡು ಕಥೆಗಳ ಕುರಿತು

ಮುಂಬಾಯಿಯ ಲೇಖಕ ರಾಮನಾಥ' ಜೋಶಿಯವರ ಸಣ್ಣ ಕತೆಗಳ ಸಂಕಲನ 'ಉತ್ಸವ'ದಲ್ಲಿನ ಹತ್ತು ಕತೆಗಳು ಗಮನ ಸೆಳೆಯುವುದು ಅವರ ಕಲ್ಪನಾಲೋಕದಲ್ಲಿ ಜೀವ ತಳೆದಿರುವ ವಿಶಿಷ್ಟ ವ್ಯಕ್ತಿಗಳಿಂದ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲುಗೊಂಡ ರಾಯರಾಗಲಿ, ಜೀವನದುದ್ದಕ್ಕೂ ಹೊಟ್ಟೆಪಾಡಿಗಾಗಿ ಅನೇಕ ತೆರನಾದ ನೌಕರಿಗಳನ್ನು ಮಾಡಿ, ಪ್ರತಿಯೊಂದು ನೌಕರಿಯಲ್ಲಿಯೂ ಹಂತಹಂತವಾಗಿ ಜುಗುಪ್ಸೆಗೊಳ್ಳುವ ಗಂಗಾರಾಮನಾಗಲಿ ಓದುಗರ ಕಣ್ಣ ಮುಂದೆ ವರ್ಣರಂಜಿತ ವ್ಯಕ್ತಿಗಳಂತೆ ಎದ್ದು ನಿಲ್ಲುತ್ತಾರೆ.

ಸಂಕಲನದ ಪ್ರಥಮ ಕತೆ ''ಅಜ್ಞಾತನ ಆತ್ಮವೃತ್ತ''ದಲ್ಲಿ ನಮ್ಮ ದೇಶದ ಸ್ವಾತಂತ್ರ್ಯೋತ್ತರದ ಸಾಮಾಜಿಕ, ಆರ್ಥಿಕ, ಆಡಳಿತಶಾಹಿ ಹಾಗೂ ವ್ಯಕ್ತಿ - ವ್ಯಕ್ತಿ ಸಂಬಂಧಗಳ ಕುಸಿತ ನೈಜ ಚಿತ್ರಣವಿದೆ. ಇದರ ಜೊತೆಗೆ ನಗರವಾಸ ವಿಶಿಷ್ಟ ಸಂವೇದನೆಗಳೂ ವೃದ್ಧಾಪ್ಯದ ಸಂವೇದನೆಗಳೂ ಸೇರಿಕೊಂಡು, ನಿವೃತ್ತ ರಾಯರು ಮನೆಯಲ್ಲಿ ಸಮರ್ಪಕವಾದ ಸ್ಥಾನವಿಲ್ಲದೆ ಕಾಲ ಕಳೆಯಲು ಟ್ರೇನ್ ಪಾಸ್ ಮಾಡಿಸಿಕೊಂಡು ಟ್ರೇನಿನಲ್ಲಿಯೇ ತಮ್ಮ ದಿನದ ಅಧಿಕ ಭಾಗ ಸವೆಸುವುದನ್ನು ಓದಿದಾಗ ಕತೆ ಜಡಗಟ್ಟಿದ ಮುಂಬಯಿ ವಾಸಿಯ ಹೃದಯವನ್ನು ಸ್ಪರ್ಶಿಸುತ್ತದೆ.

ಆತ್ಮವೃತ್ತವು ನಿರೂಪಕ ಮತ್ತು ರಾಯರ ನಡುವಿನ ಭೇಟಿಗಳಿಂದ ಆರಂಭಗೊಂಡು ತರುವಾಯ ರಾಯರ ಅಪ್ರಕಟಿತ ಆತ್ಮವೃತ್ತದ ಸಿನಾಪ್ಸಿಸ್ ಹಾಗೂ ಡೈರಿಯಲ್ಲಿ ಮೂಡಿ ಬರುತ್ತದೆ ಒಂದು ಕಾಲದಲ್ಲಿ ತಾನು ನಿಕಟವಾಗಿ ಸಂಪರ್ಕ ಏರಿಸಿಕೊಂಡಿದ್ದ ಖಾದಿ ಭಂಡಾರದ ಪರಿಸರ ಇದೀಗ ಅತ್ಯಂತ ಭ್ರಷ್ಟವಾಗಿರುವುದು; ಆಪ್ತ ಒಡನಾಡಿಯಾಗಿದ್ದ ಪ್ರಕಾಶಕ ಪರಕೀಯನಾಗಿ ತನ್ನ ಸ್ವಂತ ಲಾಭದೆಡೆ ಮುಖಮಾಡುವುದು, ಸಾಲದೆಂಬುದಕ್ಕೆ ರಾಯರ ಸ್ವಂತ ಮಗ - ಸೊಸೆಯರ ಅತಿವಿಲಾಸಿ ಜೀವನಶೈಲಿ, ಧನಾರ್ಜನೆಯೊಂದೇ ಗುರಿಯಾಗಿರುವ ಮನೆಯ ಕಲುಷಿತ ವಾತಾವರಣವೂ ಸೇರಿ ಬಾಪೂವಿನ ಉಚ್ಚ ಆದರ್ಶಗಳಿಗನುಗುಣವಾಗಿ ಬದುಕಿದ್ದವರಿಗೆ ಸಹಜವಾಗಿಯೇ ಭ್ರಮನಿರಸನ ವಾಗುತ್ತದೆ. ರಾಯ ವಿಶ್ವದ ಕುಸಿತದ ಮೂಲಕ ದೇಶದ ಪತನವನ್ನು ಮನಗಂಡ ನಿರೂಪಕನಿಗೆ ಕತೆಯ ಕೊನೆಯಲ್ಲಿ ಎದುರು ಸಾಗುತ್ತಿರುವ '42ರ ಕ್ವಿಟ್ ಇಂಡಿಯಾ ಚಳುವಳಿಯ ಸ್ವರ್ಣ ಮಹೋತ್ಸವದ ಮೆರವಣಿಗೆ ಶವಯಾತ್ರೆಯಂತೆ ಕಂಡು ಬರುತ್ತದೆ.

ಸಾಮಾನ್ಯ ಮನುಷ್ಯನೊಬ್ಬ ಬದುಕೊಡ್ಡುವ ವೈವಿಧ್ಯಮಯವಾದ ಸನ್ನಿವೇಶಗಳನ್ನು ಅನುಭವಿಸುತ್ತಾ ಹೋಗಿ ಕೊನೆಯ ಹಂತದಲ್ಲಿ ವೈರಾಗ್ಯದತ್ತ ವಾಲುವ ಪರಿಯನ್ನು 'ಪರಿವ್ರಾಜಕ' ಚಿತ್ರಿಸುತ್ತದೆ. ಇಲ್ಲಿ ಗಂಗಾರಾಮನು ಮೃಗಾಲಯ, ಸರ್ಕಸ್ ಮುಂತಾದೆಡೆಗಳಲ್ಲಿ ಪ್ರಾಣಿಗಳ ಒಡನಾಟದಲ್ಲಿದ್ದುಕೊಂಡು ಕುಡಿತ ಕಳ್ಳತನದಂಥ ದುಶ್ಚಟಗಳನ್ನೂ ಒಂದು ಬಗೆಯ ಕ್ರೌರ್ಯವನ್ನೂ ಬೆಳೆಸಿಕೊಳ್ಳುತ್ತಾನೆ. ಆಮೇಲೆ ಆಸ್ಪತ್ರೆಯ ಶವವಾಹನದ ಚಾಲಕನಾಗಿ ಸಾವು, ಗೋಳುಗಳನ್ನು ಕಂಡಾಗ ಆತನಿಗೆ ''ಮನಸ್ಸಿಗೆ ತಂಪನ್ನು ನೀಡುವ ವೃತ್ತಿಯನ್ನು ಹುಡುಕಬೇಕು'' ಎಂದು ಸಹಜವಾಗಿಯೇ ಅನಿಸುತ್ತದೆ. ಜೀವವಿರೋಧಿ ಯಾಗಿದ್ದ ಆತನ ಬದುಕು ಜೀವಪರವಾಗುವುದು ಆತ ಅಂಬುಲೆನ್ಸ್‌ನ ಚಾಲಕನಾಗಿ ರೋಗಿಗಳನ್ನು ಗುಣಮುಖಿಗೊಳಿಸುವುದರಲ್ಲಿ ಸಹಾಯಕನಾದಾಗಲೇ. ಕತೆಗೆ ತಿರುವು ಬರುವುದು ಇಲ್ಲಿ. ಹಿಂದೆ ತಾನೊಮ್ಮೆ ಕೊಂದ ನಾಯಿಯ ಮಾಲೀಕಳಾದ ಪುಟ್ಟ ಹುಡುಗಿ ಮತ್ತಾಕೆಯ ತಂದೆ ನಗುಮುಖದಿಂದ ಆಸ್ಪತ್ರೆಯಿಂದ ಹೊರಬರುವುದನ್ನು ಕಂಡು ಗಂಗಾರಾಮನಿಗೆ ಪರಮಾನಂದವಾಗುತ್ತದೆ.

ಮೃಗಾಲಯದಿಂದ ಆರಂಭಗೊಂಡ ಕತೆಯ ಎಳೆಯು ಗಂಗಾರಾಮನ ವಿವಿಧ ಅನುಭವಗಳನ್ನು ಪೋಣಿಸಿಕೊಳ್ಳುತ್ತಾ ಆಸ್ಪತ್ರೆಯ ಹೊರಗಿನ ಜೈನ ಸನ್ಯಾಸಿಯೊಬ್ಬನ ದೀಕ್ಷಾ ಪೂರ್ವ ಮೆರವಣಿಗೆಯ ವರ್ಣನೆಯಿಂದ ಮೆರವಣಿಗೆಯಲ್ಲಿ ಆನೆಯ ತುಳಿತಕ್ಕೆ ಸಿಲುಕಿಕೊಳ್ಳಲಿದ್ದ ಅದೇ ಪುಟ್ಟ ಹುಡುಗಿಯನ್ನು ಆನೆಯನ್ನು ಪಳಗಿಸುವುದರ ಮೂಲಕ ಗಂಗಾರಾಮನು ಬಚಾವು ಮಾಡುತ್ತಾನೆ. ಜೈನ ಮುನಿ ಗಂಗಾರಾಮನಿಗೆ ಬಹುಮಾನವಾಗಿ ನೀಡಿದ ಹಾರವನ್ನು ಆ ಪುಟ್ಟ ಹುಡುಗಿಯ ಕೊರಳಿಗೆ ಹಾಕಿ ಕಡಲಿನತ್ತ ನಡೆದುಬಿಡುತ್ತಾನೆ.

ಹಿಂಸೆ ಮೊದಲಾದ ತಾಮಸಿಕ ಗುಣಗಳು ವಿವಿಧ ಹಂತಗಳನ್ನು ದಾಟಿ ಅಹಿಂಸೆ - ತ್ಯಾಗಗಳಿಗೆ ಮಾರ್ಪಾಡಾಗುವುದರಿಂದ ಗಂಗಾರಾಮನ ಈ ಕತೆಗೆ 'ಪರಿವ್ರಾಜಕ' ಎಂಬ ಶಿರ್ಷಿಕೆ ಸೂಕ್ತವೆನಿಸುತ್ತದೆ. ಆತ ಆಸ್ಪತ್ರೆಯನ್ನು ತಲಪುವರೆಗೆ ಸಾಲೋಸಾಲಾಗಿ ಒಂದೇ ರೀತಿಯ ಸನ್ನಿವೇಶಗಳನ್ನೆದುರಿಸುವುದು ಆ ಲೋಕದ ಅಲ್ಪಪರಿಚಯವಿರುವವರಿಗೆ ಅಸಹಜವೆನಿಸ ಬಹುದೇನೋ. ಅಲ್ಲದೆ ಪರಿವ್ರಾಜಕನಾಗಲು ಆತನೇ ಬೆಳೆಸಿಕೊಂಡಂಥ ಕುಡಿತ ಮೊದಲಾದ ದುಶ್ಚಟಗಳು ಎಷ್ಟರ ಮಟ್ಟಿಗೆ ಕಾರಣ, ನಂತರ ಅವುಗಳೇನಾದವು ಎಂದೂ ತಿಳಿಯುವುದಿಲ್ಲ.

ಸಂಕಲನದ ಇನ್ನೊಂದು ಕತೆ 'ಬುದ್ಧನ ಭೂಮಿ'ಯಲ್ಲಿ ಲೇಖಕರು ಎಲ್ಲವನ್ನೂ ಹಗುರವಾಗಿ ತೆಗೆದುಕೊಳ್ಳುವ ಈ ದೇಶದ ಬಹುತೇಕ ಜನರ ಮನೋಭಾವವನ್ನು ಜಾಪಾನಿಯರ ಶಿಸ್ತು ಸಂಯಮಗಳಿಗೆ ಅಭಿಮುಖವಾಗಿ ನಿಲ್ಲಿಸುವುದರ ಮೂಲಕ ಮೂಡಿಸುವ ವಿಡಂಬನೆ ಪರಿಣಾಮಕಾರಿ ಯಾಗುತ್ತದೆ. 'ವಿಷಬೀಜ'ದಲ್ಲಿ ಹೆಡೆಯೆತ್ತುವ ಭಯಾನಕ ಬೀಭತ್ಸಗಳು ಕತೆ ಓದಿದ ನಂತರವೂ ಎಷ್ಟೋ ದಿನಗಳವರೆಗೆ ಮೈನಡುಗಿಸಬಲ್ಲವು.

ಒಟ್ಟಿನಲ್ಲಿ 'ಉತ್ಸವ'ದಲ್ಲಿ ರಾಮನಾಥ' ಜೋಶಿಯವರು ಓದುಗರಿಗೆ ಬದುಕಿನ ವಿವಿಧ ರುಚಿಕರವಾದ ಖಾದ್ಯಾನುಭವಗಳನ್ನು ತಮ್ಮ ದೃಷ್ಟಿಕೋನದ ನಳಪಾಕದಿಂದ ಶ್ರೀಮಂತಗೊಳಿಸಿ ಅಪ್ಯಾಯಮಾನವಾಗಿ ಉಣಬಡಿಸುತ್ತಾರೆ. ಭೋದನ ರುಚಿಕರವಾಗಿದೆ,ಮುಂದಿನ ಬಾರಿ ಮತ್ತಷ್ಟು ಬರಲಿ ಎಂಬ ಹಾರೈಕೆ ಇಲ್ಲಿದೆ.

-- ಅಹಲ್ಯಾ ಬಲ್ಲಾಳ್,
ಎಂ. ಎ. ಪ್ರಥಮ ವರ್ಗ
ಮುಂಬಯಿ

**ASTROLOGER & PUROHIT**

For all kinds of religious activities like:

1) Shodasha Samskaram, (Jaatakarma, Naamakarna etc.)
2) Astrology (Horoscope),
3) Computerised horoscope
4) Gems, (Ratnashastra)
5) Vaastushastra
6) 'Aparakriya

For computerized Marriage Bureau or any other auspicious and religious activity and advice,
Contact :
**Satyanarayan Bhatt**
J.N. – 3, Bldg., No. 17/13,
Sector – 10,
Vashi, New Mumbai.
Phone No. : 765 8555
Mobile No. : 98201 66173
E-mail at :
hindupriestin@yahoo.com

## ಕರ್ನಾಟಕ ಸಾಂಸ್ಕೃತಿಕ ಪರಂಪರೆ - ೮

# ಹೊಯ್ಸಳರು

✍ ಸುಮಾದ್ವಾರಕಾನಾಥ್

ರಾಷ್ಟ್ರಕೂಟರಾದ ಮೇಲೆ ಸುಮಾರು ಹನ್ನೆರಡನೆಯ ಶತಮಾನದ ಮಧ್ಯ ಭಾಗದವರೆಗೂ ಕಲ್ಯಾಣದ ಚಾಲುಕ್ಯರ ಆಳ್ವಿಕೆ ಭಿಲ್ಲಮನಿಂದ ನಾಶವಾಯಿತು. ಆದರೆ ಯಾದವರಿಗೆ ಪ್ರಬಲ ವಿರೋಧಿಗಳಾಗಿ ದಕ್ಷಿಣದಲ್ಲಿ ಹೊಯ್ಸಳರು ತಲೆ ಎತ್ತುತ್ತಿದ್ದರು. ಯಾದವರನ್ನು ತಡೆದು ಕರ್ನಾಟಕದ ಸಾರ್ವಭೌಮತ್ವವನ್ನು ಪಡೆಯುವ ಶಕ್ತಿಯನ್ನು ಕ್ರಮೇಣಗಳಿಸಿ ಈ ನಾಡನ್ನಾಳಿದ ಪ್ರಮುಖ ರಾಜವಂಶಗಳಲ್ಲಿ ಹೊಯ್ಸಳ ವಂಶವೂ ಒಂದು. ಕಲ್ಯಾಣ ಚಾಲುಕ್ಯರ ಸಾಮಂತರಾಗಿ ೧೧ನೆಯ ಶತಮಾನದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಆಳಿದ ಹೊಯ್ಸಳರು ನಂತರದ ಕಾಲದಲ್ಲಿ ಸ್ವತಂತ್ರ ಪ್ರಭುತ್ವ ಸ್ಥಾಪಿಸಿ ರಾಜ್ಯ ವಿಸ್ತರಿಸಿದರು. ಹೊಯ್ಸಳರು ಕಟ್ಟಿದ ದೇಗುಲಗಳು ಭವ್ಯ ಶಿಲ್ಪದ ಮಾದರಿಗಳಾಗಿ ಅವರ ಸ್ಮೃತಿಯನ್ನು ಜೀವಂತ ಇಟ್ಟಿವೆ.

ಮೂಲ : ಹೊಯ್ಸಳರು ತಮ್ಮ ವಂಶಾವಳಿಯನ್ನು ದ್ವಾರಕೆಯವರೆಗೂ ಎಳೆಯುತ್ತಾರೆ. ಆದರೆ ಬಿ.ಎಲ್. ರೈಸರು ಹೇಳಿದಂತೆ ''ದಕ್ಷಿಣ ಭಾರತದ ಎಲ್ಲ ಪ್ರಮುಖ ಮನೆತನಗಳೂ ತಮ್ಮ ಉಗಮವನ್ನು ತಾವೇ ಸೃಷ್ಟಿಸಿಕೊಂಡು ಕಾಲ್ಪನಿಕ ವಂಶಾವಳಿಗಳನ್ನು ರಚಿಸುವುದರಲ್ಲಿ ತೊಡಗಿದ್ದವು'' ಆದ್ದರಿಂದ ಹೊಯ್ಸಳರ ಉತ್ತರ ಭಾರತ ಕುಗ್ರಮದ ಕಲ್ಪನೆಯನ್ನು ಸ್ವೀಕರಿಸಲಿಕ್ಕಾಗದು.

ಸುಮಾರು ಎಲ್ಲ ಮುಖ್ಯ ಹೊಯ್ಸಳ ದಾಖಲೆಗಳು ವಂಶದ ಮೂಲ ಪುರುಷ ಸಳನ ಕತೆಯನ್ನು ನಮೂದಿಸುತ್ತವೆ. ಶಶಕಪುರದ (ಸೊಸೆ ವೂರಿನ) ಯುವಕ ಸಳನು ತನ್ನ ಕುಲದೇವತೆ ವಾಸಂತಿಕಾ ದೇವಿಯ ಮಂದಿರಕ್ಕೆ ಪೂಜೆಗೆ ಹೋದಾಗ ಹುಲಿಯೊಂದು ಪ್ರವೇಶಿಸಿತು. ಗುಡಿಯಲ್ಲಿ ವಾಸಮಾಡುವ ಜೈನ ಯತಿಗಳು ಅವನಿಗೆ ಮಾಡಿದ ಆಜ್ಞೆ 'ಹೊಯ್‌ಸಳ' ಅಂದರೆ 'ಸಳನೇ ಹೊಡೆ' ಸಳ ಹುಲಿಯನ್ನು ಹೊಡೆದು ಕೊಂದ. ಹೀಗೆ ಅವನ ವಂಶಕ್ಕೆ 'ಹೊಯ್ಸಳ' ಎಂದು ಹೆಸರು ಬಂತು. ಸಳ ಹುಲಿಗೆ ಹೊಡೆಯುವ ಚಿತ್ರ ಈ ವಂಶದ ಕೇಂದ್ರ ಚಿನ್ಹೆಯಾಗಿದೆ. ಬೇಲೂರಿನ ವಿಷ್ಣುವರ್ಧನನ ಕ್ರಿ.ಶ. ೧೧೧೭ರ ಶಾಸನದಲ್ಲಿ ಈ ಕತೆ ಮೊದಲ ಬಾರಿಗೆ ನಮೂದಿಸಿದೆ. ಆದಿಮ ಹೊಯ್ಸಳರ ಅರಸರು ಚೋಳರನ್ನು ಸೋಲಿಸಿದಾಗ ಸಳ ಹುಲಿಯನ್ನು ಕೊಂದ ಸಾಂಕೇತಿಕ ಕತೆ ಜನಿಸಿರಬಹುದು. ಹುಲಿ ಚೋಳರ ಅರಸೊತ್ತಿಗೆಯ ಚಿನ್ಹೆ.

ಈ ವಂಶದಲ್ಲಿ ಸಿಕ್ಕುವ ಮೊಟ್ಟ ಮೊದಲನೆಯ ಹೆಸರು ನೃಪಕಾಯ ಹೊಯ್ಸಳ ಎಂಬುದು. ಈ ನೃಪಕಾಯ ಮತ್ತು ಸಳ ಇವರು ಬೇರೆ ಬೇರೆ ವ್ಯಕ್ತಿಗಳಲ್ಲ. ಒಂದೇ ವ್ಯಕ್ತಿಯ ಎರಡು ಹೆಸರುಗಳು ಎಂಬುದು ವಿದ್ವಾಂಸರ ಅಭಿಪ್ರಾಯ. ಈ ನೃಪಕಾಯನಿಗೆ 'ರಾಚಮಲ್ಲ ಪೆರ್ಮಾಡಿ' ಎಂಬ ಇನ್ನೊಂದು ಹೆಸರಿದ್ದಂತೆ ತೋರುತ್ತದೆ. ಇದು ಗಂಗರಾಜರ ಹೆಸರೆಂಬುದರಲ್ಲಿ ಅನುಮಾನವಿಲ್ಲ. ಗಂಗರ ಆಶ್ರಯದಲ್ಲಿದ್ದು ಅವರ ವಂಶ ಅವನತಿಗೆ ಬಂದಂತೆಲ್ಲಾ ಅವರ ಉತ್ತರಾಧಿಕಾರಿಗಳು ತಾನೆಂದು ಹೊಯ್ಸಳರು ಹೇಳಿಕೊಳ್ಳಲಾರಂಭಿಸಿದರು.

ನೃಪಕಾಯ ಹೊಯ್ಸಳನ ನಂತರ ಅವನ ಮಗ ವಿನಯಾದಿತ್ಯ ರಾಜನಾದನು. ವಿನಯಾದಿತ್ಯ ಮತ್ತು ಅವನ ಮಗ ಎರೆಯಂಗ ಚಾಲುಕ್ಯರಿಗೆ ನಿಷ್ಠಾವಂತ ಸಾಮಂತರಾಗಿದ್ದರು. ಈ ಕಾಲದಲ್ಲಿಯೇ ಅವರ ರಾಜಧಾನಿ ಸಸಪೂರಿನಿಂದ ವೇಲಾಪುರಿ ಅಥವಾ ಬೇಲೂರಿಗೆ ಬದಲಾದಂತೆ ತೋರುತ್ತದೆ. ಮುಂದೆ ಅದರ ಸಮೀಪದ ದ್ವಾರ ಸಮುದ್ರವೇ ಇವರ ಪ್ರಮುಖ ರಾಜಧಾನಿ ಆಯಿತು. ಯುವರಾಜ ಎರೆಯಂಗನು ತಂದೆಗಿಂತ ಮೊದಲೇ ಕಾಲವಾದಂತೆ ತೋರುತ್ತದೆ. ಆದ್ದರಿಂದ ವಿನಯಾದಿತ್ಯನ ಮೊಮ್ಮಕ್ಕಳು ಬಲ್ಲಾಳ ಮತ್ತು ವಿಷ್ಣುವರ್ಧನ ಪ್ರಮುಖರಾದರು.

ವಿಷ್ಣುವರ್ಧನನ ಇನ್ನೊಂದು ಹೆಸರು ಬಿಟ್ಟಿಗ ಅಥವಾ ಬಿಟ್ಟಿದೇವ. ಇವನು ಹೊಯ್ಸಳ ಅರಸರಲ್ಲೇ ಶ್ರೇಷ್ಠ ದೊರೆ. ತನ್ನ ಶಕ್ತಿಸಾಮರ್ಥ್ಯದಿಂದ ಪೂರ್ಣ ದಕ್ಷಿಣ ಭಾರತದಲ್ಲೇ ಪ್ರಭಾವಶಾಲಿ ಅರಸನೆನಿಸಿಕೊಂಡ. ಇವನು ಪಡೆದ ಬಿರುದುಗಳು ಅಪಾರ. ಅನೇಕ ದಿಗ್ವಿಜಯಗಳಿಂದ ಹೊಯ್ಸಳ ಸಾಮ್ರಾಜ್ಯವನ್ನು ಸಾಕಷ್ಟು ವಿಸ್ತಾರಗೊಳಿಸಿದ, ಆದರೆ ಚಾಳುಕ್ಯರ ಆಜ್ಞಾಧೀನತೆಯಿಂದ ಮುಕ್ತನಾಗಲು ಹೂಡಿದ ವಿಷ್ಣುವರ್ಧನನ ಪ್ರಯತ್ನಗಳು ಫಲಿಸದೆ ಹೋದುವು. ಪರಿಣಾಮವಾಗಿ ಚಾಲುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯ ಸಿಂಹಾಸನದ ಮೇಲಿರುವವರೆಗೂ ವಿಷ್ಣುವರ್ಧನ ಅವನ ಸಾಮಂತನಾಗಿಯೇ ಉಳಿಯಬೇಕಾಯಿತು. ಈತನ ಆಳ್ವಿಕೆಯು ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಂದ ತುಂಬಿತ್ತು. ''ಹೊಯ್ಸಳ ವೈಭವದ ನಿಜ ಜನಕ'' ಎಂದು ಪ್ರೊ. ಬಿ.ಎಸ್. ಕೆ. ಅಯ್ಯಂಗಾರ್ ಕರೆದಿದ್ದಾರೆ. ಮುಂದೆ ೨ನೆಯ ಬಲ್ಲಾಳನ ಕಾಲದಲ್ಲಿ ತನ್ನ ಪೂರ್ವಜರು ಆಸೆ ಪಡುತ್ತಿದ್ದ ಸ್ವಾತಂತ್ರ್ಯ ಕೈಗೂಡಿತು. ನಂತರ ಎರಡನೆಯ ನರಸಿಂಹ, ಸೋಮೇಶ್ವರ ಮತ್ತು ಮೂರನೆಯ ನರಸಿಂಹರ ಆಳ್ವಿಕೆಯ ನಂತರ ಅವನ ಮಗ ಮೂರನೆಯ ಬಲ್ಲಾಳ ಹೊಯ್ಸಳ ವಂಶದಲ್ಲಿ ಕೊನೆಯ ಪ್ರತಾಪಶಾಲಿ ಅರಸ. ಈತನ ಐವತ್ತೆರಡು ವರ್ಷದ ದೀರ್ಘ ಆಳಿಕೆ ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣವಾದ ಅಧ್ಯಾಯವಾಗಿದೆ. ಉತ್ತರ ಭಾರತವನ್ನೇ ನಡುಗಿಸಿ ಅನೇಕ ಹಿಂದೂ ರಾಜಮನೆತನಗಳನ್ನು ಧೂಳೀಪಟ ಮಾಡಿದ ಮುಸ್ಲಿಮರ ವಕ್ರದೃಷ್ಟಿ ಈಗ ದಕ್ಷಿಣಕ್ಕೆ ಹರಿದಾಗ ದ್ವಾರ ಸಮುದ್ರ ಮಲ್ಲಿಕಾಫರನ ವಶವಾಯಿತು. ಬಲ್ಲಾಳನ ನಂತರ ಅಧಿಕಾರಕ್ಕೆ ಬಂದ ಅವನ ಮಗ ವಿರೂಪಾಕ್ಷ ೧೩೪೬ರಲ್ಲಿ ಕಾಲವಾದ. ಹೀಗೆ ಹೊಯ್ಸಳ ಸತ್ತೆ ಕೊನೆಗೊಂಡಿತು. ಆದರೆ ತಾನು ಮುಗಿದು ಹೋದರೂ ಭಾವಿ ವಿಜಯನಗರ ಸಾಮ್ರಾಜ್ಯದ ಉದಯಕ್ಕೆ ನಾಂದಿ ಹಾಡಿತು.

ವಿಷ್ಣುವರ್ಧನನ ಕಾಲದಲ್ಲಿ ಕರ್ನಾಟಕಕ್ಕೆ ಬಂದ ಶ್ರೀರಂಗದ ಶ್ರೀರಾಮಾನುಜಾಚಾರ್ಯರ ಪ್ರಭಾವದಿಂದಾಗಿ ವೈಷ್ಣವ ಧರ್ಮವು ಪ್ರಾಮುಖ್ಯಕ್ಕೆ ಬಂದಿತು. ವಿಷ್ಣುವರ್ಧನನ ಹಿರಿಯ ರಾಣಿ ಶಾಂತಲೆ ಶ್ರವಣಬೆಳಗೊಳದಲ್ಲಿ ಗಂಧವಾರಣ ಜಿನ ಬಸದಿಯನ್ನು ಬೇಲೂರಿನಲ್ಲಿ ಕಪ್ಪೆ ಚೆನ್ನಿಗರಾಯನ ದೇವಾಲಯವನ್ನೂ ಕಟ್ಟಿಸಿದಳು.

ಸಾಹಿತ್ಯ : ಒಂದು ಜನಾಂಗದ ಅಭ್ಯುದಯವನ್ನು ಅರಿಯಲು ಉತ್ತಮವೂ ಪರಿಣಾಕಾರಿಯೂ ಆದ ಮಾಧ್ಯಮವೆಂದರೆ ಅಂದಿನ ಸಾಹಿತ್ಯ. ಅದು ಅವರ ಜ್ಞಾನಾನುಭವ ಮತ್ತು ಸಾಧನೆಯ ಕಣಜವಾಗಿದೆ, ಹೊಯ್ಸಳರು ಸಾಹಿತ್ಯಕ್ಕೆ ನೀಡಿದ ಸೇವೆ ಅಪಾರ. ಕನ್ನಡ, ಸಂಸ್ಕೃತಗಳೆರಡರಲ್ಲೂ ಹೊಯ್ಸಳರ ಕಾಲದಲ್ಲಿ ಗಣನೀಯ ಸಾಹಿತ್ಯ ಸೃಷ್ಟಿ ಆಯಿತು. ಹರಿಹರ, ರಾಘವಾಂಕ, ಜನ್ನರು ಈ ಕಾಲದ ಕನ್ನಡ ಕವಿಗಳು, ಸಂಸ್ಕೃತದಲ್ಲಿ ದ್ವೈತ, ವಿಶಿಷ್ಟಾದ್ವೈತ ಸಂಪ್ರದಾಯದ ಧಾರ್ಮಿಕ ಕೃತಿಗಳು ಇದೇ ಕಾಲದಲ್ಲಿ ಉದಯಿಸಿದವು. ಕನ್ನಡ ಕವಿ ನಾಗಚಂದ್ರ ಅಥವಾ ಅಭಿನವ ಪಂಪ ಒಂದನೆಯ ಬಲ್ಲಾಳನ ಆಸ್ಥಾನಿಕವೆಂದು ನಂಬಿಕೆ. ಈತನ ರಾಮಚಂದ್ರ ಚರಿತ ಪುರಾಣಂ (ಪಂಪರಾಮಾಯಣ) ಜೈನ ರಾಮಾಯಣವನ್ನು ತಿಳಿಸುವ ಕೃತಿ. ವಿಷ್ಣುವರ್ಧನ ಕಾಲದಲ್ಲಿ ರಾಜಾದಿತ್ಯ 'ವ್ಯವಹಾರಗಣಿತ', 'ಲೀಲಾವತಿ' ಮುಂತಾದ ಗಣಿತ ಗ್ರಂಥಗಳನ್ನು ಕನ್ನಡದಲ್ಲಿ ಬರೆದ, ನರಸಿಂಹನ ಅಧಿಕಾರಿ ಸುಮನೋ ಬಾಣನು ಕನ್ನಡಕವಿಯಾಗಿದ್ದು ಜನ್ನ ಈತನ ಮಗ. ಜನ್ನ ಎರಡನೆಯ ಬಲ್ಲಾಳನ ಅಧಿಕಾರಿಯಾಗಿದ್ದು ಕವಿ ಚಕ್ರವರ್ತಿಯಾಗಿದ್ದ. ಅನೇಕ ಶಾಸನಗಳನ್ನು ಯಶೋಧರ ಚರಿತೆಯಂಥ ಗಣ್ಯ ಕಾವ್ಯವನ್ನು 'ಅನಂತನಾಥ ಪುರಾಣ'ವನ್ನು ಬರೆದಿದ್ದಾನೆ. ನರಸಿಂಹನ ಕಾಲದಲ್ಲಿ ಲೆಕ್ಕಿಗನಾಗಿದ್ದ ಹರಿಹರ, ಕೊನೆಗೆ ತನ್ನ ಉಳಿಗವನ್ನು ತ್ಯಜಿಸಿ ಹಂಪೆಯಲ್ಲಿ ನೆಲಸಿದ, ಗಿರಿಜಾ ಕಲ್ಯಾಣ ಅವನ ಖ್ಯಾತ ಚಂಪೂ ಕಾವ್ಯ, ರಗಳೆಗಳು ಅವನ ವೈಶಿಷ್ಟ್ಯ ಪೂರ್ಣ ರಚನೆಗಳು. ರಾಘವಾಂಕ ಈತನ ಸೋದರಳಿಯ ಅವನ ವಾರ್ಧಿಕ ಹೊಬ್ಬನದಿಯ 'ಹರಿಶ್ಚಂದ್ರ ಕಾವ್ಯ' ಕನ್ನಡ ಸಾಹಿತ್ಯದಲ್ಲಿ ಒಂದು

ಗಣ್ಯ ಕೃತಿ. ದೀಕ್ಷಾ ಬೋಧೆಯನ್ನು ಬರೆದ ಕೆರೆಯ ಪದ್ಮರಸ ಈ ಕಾಲದ ಇನ್ನೊಬ್ಬ ಕವಿ. ರುದ್ರ ಭಟ್ಟನು ವಿಷ್ಣು ಭಕ್ತಿಯನ್ನು ಬೋಧಿಸುವ ಜಗನ್ನಾಥ ವಿಜಯವನ್ನು ಬರೆದ. 'ನೇಮಿನಾಥ ಪುರಾಣ' ಹಾಗೂ 'ಲೀಲಾವತಿ' ಇವುಗಳನ್ನು ಬರೆದ ನೇಮಿಚಂದ್ರ ಈ ಕಾಲದ ಜೈನ ಕವಿಗಳಲ್ಲಿ ಒಬ್ಬ. 'ಸೂಕ್ತಿ ಸುಧಾರ್ಣವ' ಎಂಬ ಕನ್ನಡದ ೨೦ ಪೂರ್ವ ಕವಿಗಳ ಸೂಕ್ತಿಗಳ ಸಂಗ್ರಹದ ರಚನಕಾರ ಮಲ್ಲಿಕಾರ್ಜುನ, ಜನ್ನನ ಭಾವ. ಮಲ್ಲಿಕಾರ್ಜುನನ ಮಗನೇ 'ಶಬ್ದಮಣಿದರ್ಪಣ'

ಆಡಳಿತ : ಹಿಂದಿನ ಅರಸರ ಆಡಳಿತದಿಂದ ಹೆಚ್ಚಿನ ಬದಲಾವಣೆಗಳು ಹೊಯ್ಸಳರ ಆಡಳಿತದಲ್ಲಿ ಆದಂತೆ ಇಲ್ಲ. 'ಸಂಧಿ ವಿಗ್ರಹಿ', ಮಹಾಭಂಡಾರಿ, ಸರ್ವಾಧಿಕಾರಿ, ಮಹಾಪಸಾಯಿತ (ರಾಜವಸ್ತ್ರಗಳ ವ್ಯವಸ್ಥಾಪಕ) ಪರಮವಿಶ್ವಾಸಿ (ಆಪ್ತಕಾರ್ಯದರ್ಶಿ) ಬಾಹತ್ತರ ನಿಯೋಗಾಧಿಪತಿ ಮುಂತಾದವರು ಮಂತ್ರಿ ಪರಿಶತ್ತಿನ ಕೆಲವು ಸದಸ್ಯರು, ಇವರೆಲ್ಲರೂ ದಂಡಾಧಿಪತಿಗಳು. ರಾಜನಿಗೆ 'ಗರುಡ'ರೆಂಬ ವಿಶೇಷ ಅಂಗರಕ್ಷಕರಿದ್ದು ಅವರು ಕಾಲಿಗೆಪೆಂಡೆಯವೆಂಬ ಭಾರವಾದ ತೊಡರನ್ನು ತೊಡುತ್ತಿದ್ದರಲ್ಲದೆ, ರಾಜನ ಜೊತೆಯೇ ಅಸುನೀಗುತ್ತಿದ್ದರು. ನ್ಯಾಯ ತೀರ್ಮಾನಕ್ಕೆ ರಾಜನೇ ಶ್ರೇಷ್ಠ ನ್ಯಾಯಾಧೀಶ.

ಪಟ್ಟಣ ಹಳ್ಳಿಗಳಲ್ಲಿನ ಒಕ್ಕಲು, ಹಲವರು, ಪ್ರಜೆ ಸಮುದಾಯ ಮುಂತಾದ ಹೆಸರುಗಳ ಪ್ರತಿನಿಧಿಸಭೆಗಳೂ ಮುಂದುವರಿದವು. ಹಿಟ್ಟು ಸಮಯ ಎಂಬ ಜಾತಿ ಸಭೆಗಳೂ ಇದ್ದವು. ಶ್ರೇಣಿಗಳ ಉಲ್ಲೇಖವೂ ಇದೆ. ಹಳ್ಳಿಗಳಲ್ಲಿ ಗೌಡ, ಕರಣ, ತಳಾರರು ಸರಕಾರದ ಪ್ರತಿನಿಧಿಗಳು, ಕಂದಾಯದ ವಿವರ ನೀಡುವ 'ಕಡಿತ' ವಿಚಾರ ವಿಷ್ಣುವರ್ಧನನ ಒಂದು ಶಾಸನದಲ್ಲಿ ಬಂದಿದೆ. ಸಂತೆ, ಪೇಟೆಗಳಲ್ಲಿ ವಸ್ತು ವಾಹನಗಳ ಮೇಲೆ ಸುಂಕ, ಹೊಗೆದರೆ, ಮನೆದರೆ, ವಿವಾಹ ತೆರಿಗೆ, ಬಾಲವಣ ಅನ್ಯರಾಜಾದಾಯ ಮೂಲಗಳು ಗದ್ಯಾಣ ಅಥವಾ ಹೊನ್ನು (62 ಗ್ರೇನ್) ಪಣ (ಗದ್ಯಾಣದಹತ್ತಂಶ) ಹಾಗ (ಪಣದ ಕಾಲಂಶ) ವೀಸ (ಹಾಗದ ಕಾಲುಭಾಗ) ಬೇಳೆ, ಕಾಣಿ ಮುಂತಾದ ಬಂಗಾರದ ನಾಣ್ಯಗಳು ಚಲಾವಣೆಯಲ್ಲಿ ಇದ್ದವು.

ಕನ್ನಡ ನಾಡಿನಲ್ಲಿ ವಿಶಿಷ್ಟ ಮಾದರಿಯ ಕಲಾ ಸಂಪ್ರದಾಯವೊಂದು ರೂಪುಗೊಳ್ಳಲು ಕಾರಣರಾದ ಉಜ್ವಲ ಪರಂಪರೆಯುಳ್ಳ ಹೊಯ್ಸಳ ಅರಸರ ಧರ್ಮ, ಸಾಹಿತ್ಯ, ಕಲೆಗಳ ಸಾಧನೆ ಕರ್ನಾಟಕದ ಇತಿಹಾಸದಲ್ಲೇ ಅಲ್ಲದೆ ಭಾರತದ ಇತಿಹಾಸದಲ್ಲಿ ಒಂದು ಸುವರ್ಣ ಅಧ್ಯಾಯ. ಸುಮಾರು 2 ಶತಮಾನಗಳಿಗೂ ದೀರ್ಘಕಾಲ ಆಳಿದ (ಕ್ರಿ.ಶ. ೧೧ರಿಂದ ೧೪) ಅವರು. ಇಲ್ಲಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಅವರ ಈ ಕಾಣಿಕೆ ಅನುಪಮವಾದುದಾಗಿದೆ.

ಧರ್ಮ : ಹೊಯ್ಸಳ ಅರಸರು ಅನ್ಯ ಧರ್ಮ ಸಹಿಷ್ಣುಗಳು, ಜೈನ, ಬೌದ್ಧ ಶೈವ ಮತ್ತು ವೈಷ್ಣವ ಧರ್ಮಗಳು ಒಟ್ಟಿಗೆ ಅಸ್ತಿತ್ವದಲ್ಲಿದ್ದುವು. ವಿಷ್ಣುವರ್ಧನ ಜೈನನಾಮಯಾಯಿ, ಅನಂತರ ವೈಷ್ಣವ ಧರ್ಮಸ್ವೀಕರಿಸಿದ ಇಷ್ಟಾದರೂ, ಬೌದ್ಧ ಶೈವ ಧರ್ಮಗಳನ್ನು ನಿಂದಿಸುದುದಾಗಲೀ, ನಿರ್ಲಕ್ಷಿಸಿದುದಾಗಲೀ ಕಂಡು ಬರುವುದಿಲ್ಲ. ಹನ್ನೆರಡನೆಯ ಶತಮಾನದಲ್ಲಿ ಹೊಯ್ಸಳ ರಾಜ್ಯದಿದ್ದಲ್ಲಿ ವೀರಶೈವ ಧರ್ಮವೂ ಪ್ರವೇಶಿಸಿತು. ಎಲ್ಲಧರ್ಮೀಯರಿಗೂ ಪಕ್ಷಪಾತವಿಲ್ಲದೆ ಅವರವರ ದೇವಾಲಯಗಳ, ಧಾರ್ಮಿಕ ಸಂಸ್ಥೆಗಳ ಊರ್ಜಿತ ಹಾಗೂ ಜೀರ್ಣೋದ್ಧಾರಗಳಿಗಾಗಿ ದಾನಪತ್ರಗಳನ್ನು ಬಿಡಲಾಗಿತ್ತು ಎಂಬ ಕನ್ನಡದ ಖ್ಯಾತ ವ್ಯಾಕರಣ ಗ್ರಂಥ ಬರೆದ ಕೇಶಿರಾಜ.

ಕಲೆ ಮತ್ತು ವಾಸ್ತು ಶಿಲ್ಪ : ಹೊಯ್ಸಳರು ಕಲೆ ಮತ್ತು ವಾಸ್ತು ಶಿಲ್ಪದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಅವರು ಸಂಗೀತ, ನೃತ್ಯ ವರ್ಣಚಿತ್ರ, ಮೂರ್ತಿ ಶಿಲ್ಪಗಳಲ್ಲಿ ತೋರಿದ ಅಭಿರುಚಿ ಅಪಾರವಾದುದು. 'ಚೀರಕಟ್ಟ' ಎಂಬ ಪ್ರಸಿದ್ಧ ವರ್ಣ ಚಿತ್ರಕಾರನಿದ್ದ ಎಂಬುದಾಗಿ ರುದ್ರ ಭಟ್ಟನ ಕಾವ್ಯದಲ್ಲಿ ಪ್ರಸ್ತಾಪಿಸಲಾಗಿದೆ. ಅವರು ೫೦೦ಕ್ಕೂ ಹೆಚ್ಚು ವೈಭವ ಯುತ ಸುಂದರ ಗುಡಿಗಳನ್ನು ಕಟ್ಟಿಸಿದ್ದರೂ ಇಂದು ಪುರಾತತ್ವ ಶಾಖೆ ಸುಮಾರು ೧೦೦ ದೇವಾಲಯಗಳ ಪತ್ತೆ ಮಾತ್ರ ಆಗಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಹೊಯ್ಸಳರು ಜಗದ್ವಿಖ್ಯಾತ ಹಗಲು ಕಾರಣವಾದುದು ಅವರ ವಿಶಿಷ್ಟ ನಮೂನೆಯ ವಾಸ್ತು ಶಿಲ್ಪ. ಡಾ. ಶ್ರೀಕಂಠಶಾಸ್ತ್ರೀಯವರು ಹೊಯ್ಸಳ ಶಿಲ್ಪಶಾಸ್ತ್ರದ ವಿಭಿನ್ನತೆಯನ್ನು ಹೇಳುತ್ತಾ ''ಹೊಯ್ಸಳ ಶಿಲ್ಪಿಗಳು ತಮ್ಮಲ್ಲಿ ಪ್ರಚಲಿತವಿದ್ದ ಯಾವುದೋ ಶಿಲ್ಪಶಾಸ್ತ್ರವನ್ನು ಅನುಸರಿಸಬೇಕೆಂದು ಅಭಿಪ್ರಾಯ ಪಡುತ್ತಾರೆ.

'ಹೊಯ್ಸಳರ ಶೈಲಿ' ಅಥವಾ 'ವೇಸರ ಶೈಲಿ'ಯೆಂದೇ ಪ್ರಸಿದ್ಧವಾದ ಇವರ ದೇವಾಲಯಗಳು ಹಳೇಬೀಡು, ಬೇಲೂರು, ಸೋಮನಾಥಪುರ ಹೀಗೆ ಕರ್ನಾಟಕದ ಉದ್ದಗಲಕ್ಕೂ ಹರಡಿದೆ. ಬಳಪದಕಲ್ಲಿನ (ಕ್ಲೋರಿಟಿಕ್ ಅಸ್) ಈ ರಚನೆಗಳಲ್ಲಿ, ಈ ಕಲ್ಲಿನ ಬತ್ತು ಹರಳಿನ ಲಿಂಗ ರಚನೆಯಿಂದಾಗಿ, ಸೂಕ್ಷ್ಮಾತಿ ಸೂಕ್ಷ್ಮ ಕೆತ್ತನೆಯೂ ಸಾಧ್ಯವಾಗಿದ್ದು ಹೊಯ್ಸಳ ಶಿಲ್ಪಿಗಳು ತೀರ ಅಲಂಕೃತವಾಗಿರಲು, ವಿವರವಾದ ಕೆತ್ತನೆಗಳನ್ನು ಹೊಂದಲು ಮತ್ತು ನಾಜೂಕಾದ ತೀರುವಳಿಯನ್ನು ಪಡೆಯಲು ಇದರಿಂದ ಸಾಧ್ಯವಾಗಿದೆ. ಇದರಿಂದ ಇವರ ಕುಸುರಿನ ಕೆಲಸದಂತ ಶಿಲ್ಪಿಯ ಕೆಲಸವೇ ಎಂಬ ಭ್ರಮೆ ಹುಟ್ಟುತ್ತದೆ. ಇಲ್ಲಿನ ಸಾಲ ಭಂಜಿಕೆಯರಂತೂ ದೇಶ ವಿದೇಶಗಳ ಕಲಾ ವಿಮರ್ಶಕರ ಗಮನವನ್ನು ಸೆಳೆದಿವೆ. ಡಾ. ಡಿ.ವಿ. ಜಿ.ಯವರ 'ಅಂತಃಪುರ ಗೀತೆಗಳಲ್ಲಿ' ಇದರ ವರ್ಣನೆಯೇ ಇದೆ.

ಹೊಯ್ಸಳ (ವೇಸರ) ಶೈಲಿಯ ಪ್ರಮುಖ ಲಕ್ಷಣಗಳೆಂದರೆ

1) ನಕ್ಷತ್ರಾಕೃತಿಯ ಜಗತಿಯ ಮೇಲೆ ನಿರ್ಮಿತವಾದ ದೇವಾಲಯ.
2) ಹೊರಗೋಡೆಯ ಮೇಲೆ ವೈವಿಧ್ಯಮಯವಾದ ಚಿತ್ರಗಳ ಕೆತ್ತನೆ.
3) ಹೊರಭಾಗದ ಪ್ರದಕ್ಷಿಣ ಪಥ.
4) ಗರ್ಭಗುಡಿಯ ಮೇಲೆ ನಕ್ಷತ್ರಾಕಾರದಲ್ಲಿ ಮೇಲೇರುವ ಗೋಪುರ.
5) ಶಿಲ್ಪಜಾಲಂದ್ರಗಳು (ಕಿಟಕಿ)
6) ಸೂಕ್ಷ್ಮ ಎತ್ತನೆಯ ಕಂಭಗಳು
7) ಒಂದರಿಂದ ಐದು ಗರ್ಭ ಗೃಹಗಳಿರುವ -ಏಕಕೂಟ, ದ್ವಿಕೂಟ, ಚೌಕೂಟ, ಪಂಚಕೂಟ ಎಂಬ ದೇವಾಲಯಗಳು.
8) ನಿರ್ಮಾಣದಲ್ಲಿ ಗಾರೆಯ ಬಳಕೆಯೇ ಇಲ್ಲದೆ ಕೆತ್ತಿ ಸಿದ್ಧಗೊಳಿಸಿದ ಕಲ್ಲುಗಳನ್ನು ಒಂದರಲ್ಲೊಂದು ರಂಧ್ರಗಳಲ್ಲಿ ಜೋಡಿಸು ವುದು.
9) ಗುಣ ಮಟ್ಟದಲ್ಲಿ ಉತ್ತಮವಾದ ಬಳಪದ ಕಲ್ಲಿನ ಬಳಕೆ ಹೀಗೆ ಹೊಯ್ಸಳ ಶೈಲಿಯು ವಿಶಿಷ್ಟತೆಯನ್ನು ಹೊಂದಿದೆ.

ಹೊಯ್ಸಳರ ಕಾಲ ಕಲೆ ಮತ್ತು ವಾಸ್ತು ಶಿಲ್ಪದಲ್ಲಿ ಸ್ಮರಣೀಯವಾದಂತೆ ಸಂಗೀತ, ನೃತ್ಯದಲ್ಲೂ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ನರ್ತನದಲ್ಲಿ ರಾಣಿಯರೂ ಪರಿಣತಿ ಉಳ್ಳವರಾಗಿದ್ದರು. ಅವರಲ್ಲಿ ಪದ್ಮಲಾ ಚಂಡಲಾ, ಶಾಂತಲೆ, ಬೊಪ್ಪಲದೇವಿ, ಚಾಮಲದೇವಿ ಪ್ರಮುಖರು. ವಿಷ್ಣುವರ್ಧನನ ಪಟ್ಟದ ಅರಸಿ ಶಾಂತಲೆ 'ನೃತ್ಯ ವಿಶಾರದೆ' ಎಂಬ ಬಿರುದಿಗೆ ಪಾತ್ರಳಾಗಿದ್ದಳು. ಹೊಯ್ಸಳರ ದೇವಾಲಯಗಳಲ್ಲಿರುವ ವಿವಿಧ ಭಂಗಿಗಳಲ್ಲಿನ ಮದನಿಕ ವಿಗ್ರಹಗಳನ್ನು ವರ್ಣಿಸುವುದು ಅಸದಳ. ವಾಸ್ತುಶಿಲ್ಪದಲ್ಲಿ ನರ್ತಕರನ್ನೂ, ವಾದ್ಯಗಳನ್ನೂ ಹಿಮ್ಮೇಳದವರನ್ನು ಕಾಣಬಹುದು.

ಹೀಗೆ ಈ ರಾಜರುಗಳೆಲ್ಲಾ ದೇವಾಲಯವನ್ನು ಕಟ್ಟಿಸುವ ಪರಂಪರೆಯನ್ನು ಬೆಳಸಿಕೊಂಡು ಬಂದರು. ಆ ದೇವಾಲಯಗಳನ್ನು ಅಲಂಕರಿಸುವ ಶಿಲ್ಪಕಲೆಯ ಕುಶಲತೆಯೂ ಆ ಕಾಲದ ಅಪೂರ್ವ ಸಾಧನೆಗೆ ಸಾಕ್ಷಿ ಆಗಿದೆ. ●

---

ವಿಶಿಷ್ಟ ಕಾದಂಬರಿಕಾರ - ಕುಸುಮಾಕರ

(ಪುಟ ೬ರಿಂದ)

ಭಾಷೆಯ ಮೇಲೂ ಅವರಿಗೆ ಒಳ್ಳೆಯ ಹಿಡಿತವಿದೆ. ಗಂಗಾಧರ ಗಾಡಗೀಳರು ಮರಾಠಿಯಲ್ಲಿ ಬರೆದ ಬೃಹತ್ ಕಾದಂಬರಿ ದುರ್ದಮ್ಯವನ್ನು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಆದರ್ಶ, ವಾಸ್ತವಿಕತೆ, ಬದುಕಿನ ಬಗೆಗೆ ಅವರಿಗಿರುವ ತೀವ್ರವಾದ ಕಾಳಜಿ ದಿವಾಣಜಿ ಅವರ ಕೃತಿಗಳಲ್ಲಿ ಹೃದ್ಯವಾಗಿ ಪಡಿ ಮೂಡಿವೆ. ಇಂಥ ಇನ್ನಷ್ಟು ಕೃತಿಗಳನ್ನು ಅವರು ಕನ್ನಡಕ್ಕೆ ನೀಡಲಿ ಎಂಬುದೇ ನಮ್ಮ ಹಾರೈಕೆ.

-- ಡಾ. ಜಿ. ಎನ್. ಉಪಾಧ್ಯ

Regn. No. 040015/86
Regn. No. TECH/47-202/MBI-2001
Date of Posting : 16-2-2001

## ಸುತ್ತಮುತ್ತ

### ಕನ್ನಡ ಸಂಘ, ಠಾಣೆಯ 17ನೇ ವಾರ್ಷಿಕೋತ್ಸವದ ಅಂಗವಾಗಿ 'ಬೆಂದ ಕಾಳೂರು' ನಾಟಕ

ಇತ್ತೀಚೆಗೆ ಕನ್ನಡ ಸಂಘ, ಠಾಣೆಯವರ 17ನೇ ವಾರ್ಷಿಕೋತ್ಸವ ಗಡಕರಿ ರಂಗಾಯತನ್‌ನಲ್ಲಿ ಜ. 21ರಂದು ಆಚರಿಸಲ್ಪಟ್ಟಿತು. ಆ ದಿನ ಮೈಸೂರು ಅಸೋಸಿಯೇಷನ್ ಲಲಿತಾ ಕಲಾ ವಿಭಾಗದವರಿಂದ ಡಾ. ಮಂಜುನಾಥ್‌ರವರಿಂದ ವಿರಚಿತ ಬೆಂದಕಾಳೂರು ನಾಟಕ ಪ್ರದರ್ಶಿಸಲ್ಪಟ್ಟಿತು. (ಇದು ಮಾಸ್ತಿಯವರ ಚೆನ್ನಮ್ಮ ಕತೆ ಆಧಾರಿತ)

ಇದು ಒಂದು ಸಾಮಾಜಿಕ ನಾಟಕ ಕರುಣಾರಸ ಪೂರ್ಣವಾದದ್ದು ಹಾಗೂ ಹೃದಯ ಸ್ಪರ್ಶಿಯಾದ ನಾಟಕವಾಗಿತ್ತು. ಕಾರಖಾನೆಗಳಲ್ಲಿ ಸಂಪು ನಡೆದಾಗ... ಅವರನ್ನು ಕೆಲವು ಮುಖಂಡರು ತಮ್ಮ ಸ್ವಾರ್ಥಕ್ಕಾಗಿ ಅವರ ಜೀವನದ ಜೊತೆ ಆಟವಾಡುವುದು, ದಾರಿತಪ್ಪಿಸಿ ಅವರ ಜೀವಕ್ಕೆ ಮಾರಕವಾಗುವುದನ್ನು ಮಂಜುನಾಥ್‌ರವರು ನಾಟಕದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

ಹಳ್ಳಿಯ ಹೆಣ್ಣು ಚೆನ್ನಿಯ ಪಾತ್ರವನ್ನು ಸೌಮ್ಯರವರು ಚೆನ್ನಾಗಿ ನಟಿಸಿದ್ದಾರೆ. ಹೂವಿನಂತಾ ಮನಸ್ಸಿನ ಹಳ್ಳಿಯ ಹೆಣ್ಣು, ಚೆನ್ನಿ ಗಂಡನ ದೌರ್ಜನ್ಯ, ಮೋಸ, ವಂಚನೆಗೆ ಸಿಲುಕಿ ನೊಂದು ಬೆಂದ ಅವಳ ಹೃದಯ ಗಂಡನ ಸಾವಿನ ವಾರ್ತೆಯಿಂದಲೂ ಕರಗದ ಕಲ್ಲಾಗಿ ಬಿಟ್ಟಿತು.

ಎಲ್ಲರ ಮನಸ್ಸನ್ನು ಸೆಳೆದ ಪಾತ್ರ ಅರಳುತ್ತಿರುವ ಮಲ್ಲಿಗೆಯಂತಿರುವ ಮಲ್ಲಿಯದು. ಈ ಪಾತ್ರ ಮಾಡಿದ ಬಾಲಕಿ ಪ್ರಿಯಂಕಾಳ ಪಾತ್ರ, ನಟನೆಯಾಗಿರದೆ, ಜೀವಂತವಾಗಿ ಮೂಡಿ ಬಂದಿತ್ತು. ಅವಳ ಮಾತು, ನಡಿಗೆ ಎಲ್ಲವೂ ವಿಶಿಷ್ಟವಾಗಿತ್ತು. ಆ ಮಗುವಿನ ಮರಣದ ದೃಶ್ಯ ಸಭಿಕರಲ್ಲಿ ಕಣ್ಣೀರು ತರಿಸಿದ ಹೃದಯ ಸ್ಪರ್ಶಿ ದೃಶ್ಯವಾಗಿತ್ತು. ಆ ಮಗುವಿಗೆ ಉತ್ತಮ ಮಾರ್ಗದರ್ಶನ ಸಿಕ್ಕಲ್ಲಿ ಅದ್ಭುತ ಭವಿಷ್ಯವಿದೆ, ಉತ್ತಮ ನಟಿ ಆಗಬಲ್ಲಳು.

ಎಲ್ಲಾ ಕಲಾವಿದ, ಕಲಾವಿದೆಯರ ಪಾತ್ರವೂ ಉತ್ತಮವಾಗಿತ್ತು.

### ಸಾಹಿತ್ಯಕ ಸ್ಪರ್ಧೆಯಿಂದ ಅರಿವಿನ ವಿಸ್ತರಣೆ

- ಕೆ. ಜಯರಾಮ ಆಳ್ವ

ಸಿದ್ಧರಾಮಯ್ಯ ಪಾಟೀಲ ಕೂಡಲ ಮಠ ವಚನ ದತ್ತಿಯ ವತಿಯಿಂದ ಮಹಿಳಾ ವಿಭಾಗವು 'ವಚನ ವಿವರಣೆ'ಯ ಸ್ಪರ್ಧೆಯನ್ನು ಹಮ್ಮಿಕೊಂಡದ್ದು ಅಭಿನಂದನೀಯ. ಪ್ರಯೋಗಾತ್ಮ ಸಾಹಿತ್ಯಕ ಸ್ಪರ್ಧೆಯಿಂದ ನಮ್ಮ ಜ್ಞಾನ, ಅರಿವಿನ ವಿಸ್ತರಣೆ ಮಾಡುವುದೇ ಮುಖ್ಯ ಉದ್ದೇಶವೆಂದು ಸಂಘದ ಅಧ್ಯಕ್ಷ ಕೆ. ಜಯರಾಮ ಆಳ್ವರು ಕರ್ನಾಟಕ ಸಂಘದ ಮುಂಬಯಿಯ ಮಹಿಳಾ ವಿಭಾಗವು ಇತ್ತೀಚೆಗೆ ಆಯೋಜಿಸಿದ ವಚನ ವಿವರಣಾ ಸ್ಪರ್ಧೆಯ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು. ಶ್ರೀಯುತರು ಮಾತನಾಡುತ್ತಾ ಮುಂದಿನ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಹನೀಯರು, ಮಹಿಳೆಯರು ಸ್ಪರ್ಧೆಯಲ್ಲಿ ಭಾಗವಹಿಸಿ ನಮಗೆ ಪ್ರೋತ್ಸಾಹ ನೀಡಬೇಕೆಂದು ತಿಳಿಸಿದರು.

ಸ್ಪರ್ಧೆಗೆ 14 ಮಹಿಳೆಯರು ಭಾಗವಹಿಸಿ ತಾವು ಆಯ್ಕೆ ಮಾಡಿದ ವಚನಕಾರರ ಕಿರು ಪರಿಚಯ ನೀಡಿ ನಂತರ ವಿಶ್ಲೇಷಿಸಿದರು. ಸ್ಪರ್ಧೆಯಲ್ಲಿ ಹೆಚ್ಚಾಗಿ ಬಸವಣ್ಣನವರ ವಚನವನ್ನೇ ಹೇಳಿದರು. ಕೆಲವರು ಸರ್ವಜ್ಞ, ಅಕ್ಕಮಹಾದೇವಿ, ಅಲ್ಲಮಪ್ರಭು ಹಾಗೂ ಜೇಡರ ದಾಸಿಮಯ್ಯನ ವಚನವನ್ನು ಹೇಳಿ ತೀರ್ಪುಗಾರರ ಮೆಚ್ಚುಗೆ ಪಡೆದರು.

ಡಾ. ಗಿರಿಜಾ ಶಾಸ್ತ್ರಿ, ಜಾ. ವಾಣಿ ಉಚ್ಚಿಲ್ಕರ್ ಹಾಗೂ ಶ್ರೀ ನಾಗಭೂಷಣರವರು ತೀರ್ಪುಗಾರರಾಗಿ ಸಹಕರಿಸಿದರು. ಡಾ. ಗಿರಿಜಾ ಶಾಸ್ತ್ರಿಯವರು ಅಕ್ಕಮಹಾದೇವಿಯ ವಚನಗಳ ಬಗ್ಗೆ ಉಲ್ಲೇಖಿಸಿ 12ನೆಯ ಶತಮಾನದ ಅಕ್ಕಮಹಾದೇವಿಯು ಅಂದಿನ ಸಮಾಜವನ್ನು ಎದುರಿಸಿದ ದಿಟ್ಟ ಮಹಿಳೆ. ಸ್ತ್ರೀಯರನ್ನು ಕೇವಲ ಭೋಗದ ವಸ್ತುವೆಂದು ಕಾಮುಕ ದೃಷ್ಟಿಯಿಂದ ಹೀನಾಯವಾಗಿ ವ್ಯವಹರಿಸುತ್ತಿದ್ದ ಕಾಲದಲ್ಲಿ ಸಮಾಜದ ಕಟ್ಟಳೆಗಳನ್ನು ಮುರಿದು ಚೆನ್ನಮಲ್ಲಿಕಾರ್ಜುನನಿಗೆ ತನ್ನನ್ನು ಅರ್ಪಿಸಿ ಅಪೂರ್ವ ಭಕ್ತಿಯಿಂದ ಮುಕ್ತಿಯನ್ನು ಪಡೆದ ಶಿವಶರಣಳು. 20ನೇ ಶತಮಾನದಲ್ಲಿ ಅಕ್ಕ ಮಹಾದೇವಿಯ ವಚನಗಳಿಗೆ ಮನ್ನಣೆ ಸಿಗುತ್ತಿರುವುದು ಒಂದು ವಿಶೇಷತೆ ಎಂದು ತಿಳಿಸಿದರು.

ಡಾ. ಉಚ್ಚಿಲ್ಕರ್‌ರವರು ಸರ್ವಜ್ಞರ ತ್ರಿಪದಿಗಳ ಬಗ್ಗೆ ತಿಳಿಸಿ ಸಂಸ್ಕೃತ ಉಪನಿಷತ್ತುಗಳ ಹಾಗೆ ವಚನಗಳನ್ನು ಕನ್ನಡದ ಉಪನಿಷತ್ತುಗಳೆನ್ನಬಹುದು ಎಂದು ತಿಳಿಸಿದರು. ಮುಂದುವರಿಯುತ್ತಾ ಇದು ಮೌಖಿಕ ಸಾಹಿತ್ಯ. ಈ ಅಮೂಲ್ಯ ಸಾಹಿತ್ಯವನ್ನು ಸಂಗ್ರಹಿಸುವ ಕೆಲಸವು ಇತ್ತೀಚೆಗೆ ನಡೆಯುತ್ತಿರುವುದು ಶ್ಲಾಘನೀಯ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು.

ಶ್ರೀ ನಾಗಭೂಷಣರವರು ಬಸವಣ್ಣನವರ ''ದಯೆ ಇಲ್ಲದ ಧರ್ಮ ಯಾವುದಯ್ಯಾ?'' ಎಂಬುವುದರ ಬಗ್ಗೆ ಪ್ರಕಾಶ ಬೀರಿದರು.

ಸಂಘದ ಗೌ. ಪ್ರ. ಕಾರ್ಯದರ್ಶಿ ರವಿ. ರಾ. ಅಂಚನ್‌ರವರು ತಮ್ಮ ಪ್ರಸ್ತಾವಿಕ ಭಾಷಣದಲ್ಲಿ ಜಾಗತಿಕ ಸಾಹಿತ್ಯಕ್ಕೆ ಕನ್ನಡದ ವಚನ ಸಾಹಿತ್ಯವು ಒಂದು ಅಮೂಲ್ಯ ಬಳುವಳಿ ಎಂದು ಹೇಳಿದರು.

ದತ್ತಿ ಸ್ಥಾಪಕರಾದ ಶ್ರೀ ಮತ್ತು ಶ್ರೀಮತಿ ರಾಜಶೇಖರ್ ಪಾಟೀಲರು ಉಪಸ್ಥಿತರಿದ್ದರು. ಅವರು ವಚನದ ಬಗ್ಗೆ ತಮ್ಮ ಕೆಲವು ಅನಿಸಿಕೆಗಳನ್ನು ಮಂಡಿಸಿದರು.

ಮಹಿಳಾ ವಿಭಾಗದ ಸಂಚಾಲಕಿ ಶ್ರೀಮತಿ ಗಾಯತ್ರಿ ರಾಮು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿಕೊನೆಗೆ ವಂದನಾರ್ಪಣೆಗೈದರು.

ವಚನ ಸ್ಪರ್ಧೆಯ ವಿಜೇತರು
ಮೊದಲ ಬಹುಮಾನ ಡಾ. ಶಾರದಾ ಗದ್ವಾಲ್
ದ್ವಿತೀಯ ಬಹುಮಾನ ಶ್ರೀಮತಿ ಮಮತಾರಾವ್
ತೃತೀಯ ಬಹುಮಾನ ಶ್ರೀಮತಿ ವಿದ್ಯಾದೇಶಪಾಂಡೆ
ಸಮಾಧಾನಕರ ಬಹುಮಾನ

೧. ಶ್ರೀಮತಿ ಶೈಲಾ ಮೂರ್ತಿ
೨. ಶ್ರೀಮತಿ ಶ್ಯಾಮಲಾ ರಾಧೇಶ್

### ಹೊರನಾಡ ಕನ್ನಡ ಸಂಸ್ಕೃತಿ ಇಲಾಖೆ ಸ್ಥಾಪಿಸಲು ಕರೆ

ಹೊರನಾಡಿನಲ್ಲಿ ಕನ್ನಡ ಸಂಸ್ಕೃತಿ ನಶಿಸದೆ ಸರಿಯಾಗಿ ಬೆಳೆದು ಬರಲು, ಕನ್ನಡ ಚಟುವಟಿಕೆಗಳಿಗೆ ಪುಷ್ಟಿದೊರೆಯಲು ಕರ್ನಾಟಕ ಸರ್ಕಾರ ಪ್ರತ್ಯೇಕ ಕನ್ನಡ ಸಂಸ್ಕೃತಿ ಇಲಾಖೆ ಆರಂಭಿಸಬೇಕಲ್ಲದೆ ಕರ್ನಾಟಕದಲ್ಲಿ ಪ್ರವಾಸೋದ್ಯಮ ಶ್ರೀಮಂತವಾಗಲು ದಿಲ್ಲಿ ಸಹಿತ ಹೊರನಾಡ ಪ್ರಮುಖ ಕೇಂದ್ರಗಳಲ್ಲಿ ಕರ್ನಾಟಕ ಪ್ರವಾಸೋದ್ಯಮ ಮಾಹಿತಿ ಕೇಂದ್ರ ಸ್ಥಾಪಿಸಬೇಕೆಂದು ದಿಲ್ಲಿಯಲ್ಲಿ ದೆಹಲಿ ಕರ್ನಾಟಕ ಸಂಘರ್ಷ ಸಮಿತಿ ಜ. 21ರಂದು ಏರ್ಪಡಿಸಿದ್ದ ಒಂದು ದಿನದ ಕನ್ನಡ ಕಾರ್ಯಕರ್ತರ ಸಮಾವೇಶವು ಆಗ್ರಹ ಪಡಿಸಿದೆ.

'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶವು ಕೇಂದ್ರ ಸರ್ಕಾರವು ನೆನೆಗುದಿಯಲ್ಲಿರುವ ಕರ್ನಾಟಕದ ಎಲ್ಲ ಯೋಜನೆಗಳಿಗೆ ಅನುಮತಿ ನೀಡಿ ಕಾರ್ಯಗತಗೊಳಿಸಬೇಕು, ದಿಲ್ಲಿ-ಬೆಂಗಳೂರು ನಡುವೆ ಪ್ರತಿದಿನ ಮತ್ತೊಂದು ಅತಿವೇಗದ ಎಕ್ಸ್‌ಪ್ರೆಸ್ ರೈಲನ್ನು ಆರಂಭಿಸಬೇಕು, ಹಾಸನ - ಮಂಗಳೂರು ನಡುವಿನ ಬ್ರಾಡ್‌ಗೇಜ್ ರೈಲು ಮಾರ್ಗದ ಕೆಲಸವನ್ನು ಕೂಡಲೆ ಸಂಪೂರ್ಣಗೊಳಿಸಬೇಕು, ಮಹಾಜನ ವರದಿಯನ್ನು ಜಾರಿಗೊಳಿಸಿ ಮಹಾರಾಷ್ಟ್ರ - ಕರ್ನಾಟಕ ಗಡಿ ಸಮಸ್ಯೆ ಮುಕ್ತಾಯಗೊಳಿಸಬೇಕು ಎಂದು ಒತ್ತಾಯಿಸಿದೆ.

ದಿಲ್ಲಿ ಸರ್ಕಾರವು ದಕ್ಷಿಣ ಭಾರತೀಯ ಭಾಷೆಗಳಿಗೆ ಪ್ರತ್ಯೇಕ ಅಕಾಡಮಿ ಸ್ಥಾಪಿಸಬೇಕು, ದಿಲ್ಲಿಯ ಮುಖ್ಯ ರಸ್ತೆ, ಪಾರ್ಕುಗಳಿಗೆ ಖ್ಯಾತ ಕನ್ನಡಿಗರ ಹೆಸರನ್ನಿಡಬೇಕು, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ಮೂರ್ತಿಯನ್ನು ದಿಲ್ಲಿಯಲ್ಲಿ ಪ್ರತಿಷ್ಠಾಪಿಸಬೇಕು ಎಂದು ಸಮಾವೇಶವು ಆಗ್ರಹ ಪಡಿಸಿದೆ ಎಂದು ಸಮಿತಿ ಸಂಚಾಲಕ ಬಾ. ಸಾಮಗ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38